Swabhimani Sahakari
Pages : 34 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 20
Issue - 08
August - 2023

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



ಆಗಸ್ಟ್ 15
ಸ್ವಾತಂತ್ರ್ಯ ದಿನಾಚರಣೆ

ಆಗಸ್ಟ್ 29

## 22ನೇ ವಾರ್ಷಿಕ ಸಾಮಾನ್ಯ ಸಭೆ

ಲಕ್ಷ್ಮೀ ಬಾರಮ್ಮ ಭಾಗ್ಯ ಲಕ್ಷ್ಮಿ ಬಾರಮ್ಮ
ಬೆಳಗಲು ಮನೆಯನ್ನು ಸಿರಿ ದೇವಿಯೇ...
ಕಾಲ್ಲಲಿ ಕಿರು ಗೆಜ್ಜೆ ಘಲು ಘಲು ಎಂದಾಗ
ಮನೆಯಲ್ಲಿ ನೂರು ವೀಣೆ
ನಾದ ಹೊಮ್ಮಿ ಚಿಮ್ಮಲಿ...

-ಚಿ. ಉದಯಶಂಕರ್



ಆಗಸ್ಟ್ 25
ವರಮಹಾಲಕ್ಷ್ಮೀ ವ್ರತ

ಆಗಸ್ಟ್ 31
ರಾಖಿ ಹಬ್ಬ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5990

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1624

# ಸಂಪರ್ಕ ಸಭೆಗಳಿಗೆ ಸದಸ್ಯ ಸಹಕಾರಿಗಳ ಹಾಜರಾತಿ ಹಾಗೂ ಚರ್ಚೆಗಳು ಪ್ರಗತಿಗೆ ಪೂರಕ : ಸಂಬಂಧಗಳನ್ನು ಹಾಗೂ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಪ್ರಾಮಾಣಿಕ ಪ್ರಯತ್ನ.



ಜಿ. ನಂಜನಗೌಡ

"ಎಲ್ಲರಿಗೂ 76ನೇ ಸ್ವಾತಂತ್ರೋತ್ಸವ ಹಾಗೂ ವರಮಹಾಲಕ್ಷ್ಮಿ ಹಬ್ಬದ ಹಾರ್ದಿಕ ಶುಭಾಶಯಗಳು. 75ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಆತ್ಮನಿರ್ಭರಭಾರತ ನಿರ್ಮಾಣ–ಕಾರ್ಯದಲ್ಲಿ ಸಹಕಾರಿಗಳು ನಿರ್ವಹಿಸಿದ ಮಹತ್ವದ ಪಾತ್ರವನ್ನು ನೆನಸಿಕೊಳ್ಳುತ್ತ 76ನೇ ಸ್ವಾತಂತ್ರ್ಯೋತ್ಸವವನ್ನು ಅಷ್ಟೆ ಉತ್ಸಾಹದಿಂದ ಆಚರಿಸುವ ಸಂಕಲ್ಪವನ್ನು ಮಾಡೋಣ. ಸಹಕಾರಿ ಕ್ಷೇತ್ರದ ಮೂಲಕ ಆತ್ಮನಿರ್ಭರ ಭಾರತ ನಿರ್ಮಾಣ ಸಾಧ್ಯ ಎಂಬುದನ್ನು ಸಾಧಿಸಿ ತೋರಿಸೋಣ. ಶ್ರೀ ವರಮಹಾಲಕ್ಷ್ಮಿ ದೇವತೆಯು ಎಲ್ಲ ಸಹಕಾರಿಗಳಿಗೂ ಹಾಗೂ ಅವರ ಕುಟುಂಬ ವರ್ಗವರಿಗೆಲ್ಲ ಶಾಂತಿ ಸುಖ ನೆಮ್ಮದಿಯನ್ನು ನೀಡಲಿ ಆಯುರಾರೋಗ್ಯ ಹಾಗೂ ಐಶ್ವರ್ಯವನ್ನು ನೀಡಲಿ ಸನ್ಮಂಗಳವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ."

**ಆತ್ಮೀಯ ಸಹಕಾರಿ ಬಂಧುಗಳೆ,**

ಎಲ್ಲರಿಗೂ 76ನೇ ಸ್ವಾತಂತ್ರೋತ್ಸವ ಹಾಗೂ ವರಮಹಾಲಕ್ಷ್ಮಿ ಹಬ್ಬದ ಹಾರ್ದಿಕ ಶುಭಾಶಯಗಳು. 75ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಆತ್ಮನಿರ್ಭರಭಾರತ ನಿರ್ಮಾಣಕಾರ್ಯದಲ್ಲಿ ಸಹಕಾರಿಗಳು ನಿರ್ವಹಿಸಿದ ಮಹತ್ವದ ಪಾತ್ರವನ್ನು ನೆನಸಿಕೊಳ್ಳುತ್ತ 76ನೇ ಸ್ವಾತಂತ್ರ್ಯೋತ್ಸವವನ್ನು ಅಷ್ಟೆ ಉತ್ಸಾಹದಿಂದ ಆಚರಿಸುವ ಸಂಕಲ್ಪವನ್ನು ಮಾಡೋಣ. ಸಹಕಾರಿ ಕ್ಷೇತ್ರದ ಮೂಲಕ ಆತ್ಮನಿರ್ಭರ ಭಾರತ ನಿರ್ಮಾಣ ಸಾಧ್ಯ ಎಂಬುದನ್ನು ಸಾಧಿಸಿ ತೋರಿಸೋಣ. ಶ್ರೀ ವರಮಹಾಲಕ್ಷ್ಮಿ ದೇವತೆಯು ಎಲ್ಲ ಸಹಕಾರಿಗಳಿಗೂ ಹಾಗೂ ಅವರ ಕುಟುಂಬ ವರ್ಗವರಿಗೆಲ್ಲ ಶಾಂತಿ ಸುಖ ನೆಮ್ಮದಿಯನ್ನು ನೀಡಲಿ ಆಯುರಾರೋಗ್ಯ ಹಾಗೂ ಐಶ್ವರ್ಯವನ್ನು ನೀಡಲಿ ಸನ್ಮಂಗಳವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ.

ಪ್ರತಿವರ್ಷದಂತೆ ಈ ವರ್ಷವೂ ರಾಜ್ಯದಾದ್ಯಂತ ಜುಲೈ ಎರಡನೇ ವಾರದಿಂದ ಆಗಸ್ಟ್ 3ನೇ ವಾರದ ವರೆಗೆ ಒಟ್ಟಾರೆ 29 ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆಗಳನ್ನು ನಡೆಸಲಾಗುತ್ತಿದೆ. ಜುಲೈ ಮಾಹೆಯಲ್ಲಿ 13 ಸಭೆಗಳನ್ನು ನಡೆಸಲಾಗಿದೆ. ಆಗಸ್ಟ್ ಮಾಹೆಯಲ್ಲಿ 16 ಸಭೆಗಳನ್ನು ನಡೆಸಲಾಗುವುದು. ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳ ಭಾಗವಹಿಸುವಿಕೆ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಅತ್ಯಂತ ಪ್ರೋತ್ಸಾಹದಾಯಕವಾಗಿತ್ತು. ಸೌಹಾರ್ದ ಸಹಕಾರಿಗಳ ದೈನಂದಿನ ಸಮಸ್ಯೆಗಳು, ಪರಿಹಾರೋಪಾಯಗಳು ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಅವಕಾಶಗಳ ಬಗ್ಗೆ ವಿಸ್ತೃತ ಚರ್ಚೆಗಳು ನಡೆದಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ವಿಶ್ವಾಸಾರ್ಹತೆಯನ್ನು ಹೆಚಿಸಿದೆ. ಮತ್ತು ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಸಂಬಂಧಗಳನ್ನು ಉತ್ತಮವಾಗಿಸಲು ಸಹಕಾರಿಯಾಗಿದೆ.

ಸಹಕಾರ ಕ್ಷೇತ್ರದ ಮೂಲಕ ಸಾಧಿಸಿದ್ದು ಸಾಕಷ್ಟು ಇದೆ. ಸಾಧಿಸಬೇಕಾದುದು ಸಾಕಷ್ಟಿದೆ. ಸಾಧನೆಗಳು ಜನಸಾಮಾನ್ಯರಿಗೆ ತಿಳಿಯಬೇಕು. ಜನಸಾಮಾನ್ಯರಿಗೆ ಸಹಕಾರಿ ಕ್ಷೇತ್ರದ ಬಗ್ಗೆ ವಿಶ್ವಾಸ ಹೆಚ್ಚಿಸಲು ಬಹು ಮುಖ್ಯವಾಗಿ ಉತ್ತಮ, ಪ್ರಾಮಾಣಿಕ ಹಾಗೂ ದಕ್ಷ ಸೇವೆಗಳು ದೊರಕಬೇಕು. ಸಹಕಾರ ಕ್ಷೇತ್ರ ತನ್ನ ಅಸ್ತಿತ್ವವನ್ನು ತೊರಿಸಿಕೊಳ್ಳುವಂತಹ ವಿಭಿನ್ನ ಹಾಗೂ ವೈಶಿಷ್ಟಪೂರಕ ವಿಶೇಷ ಸೇವೆಗಳನ್ನು ಒದಗಿಸಬೇಕು. ಹಾಗಾದಲ್ಲಿ ಮಾತ್ರ ಇಂದಿನ ಪೈಪೋಟಿ ಯುಗದಲ್ಲಿ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಈ ಕ್ಷೇತ್ರದಲ್ಲಿ ಮಾತ್ರ ಸಮಾಜದ ಕಟ್ಟ ಕಡೆಯ ಅವಕಾಶ ವಂಚಿತ ಜನರನ್ನು ಶೋಷಿತರನ್ನು ತಲುಪುವ ಅವಕಾಶವಿದೆ. ದೇಶದಲ್ಲಿ ಅನೇಕ ಸಹಕಾರಿ ಸಂಸ್ಥೆಗಳು ಉತ್ತಮ ಕೆಲಸಗಳನ್ನು ಮಾಡುತ್ತಲಿವೆ. ವಿಶೇಷವಾಗಿ ಕೃಷಿ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕುಗಳು ಕ್ರೆಡಿಟ್ ಸಹಕಾರ ಸಂಘಗಳು ಸೌಹಾರ್ದ ಸಹಕಾರ ಸಂಘಗಳು ಜನರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿವೆ. ಅವುಗಳನ್ನು ಅಧ್ಯಯನ ಮಾಡಿ ಅವರು ಅನುಸರಿಸಿದ ದಾರಿಯನ್ನು ಅಧ್ಯಯನ ಮಾಡಿ ಅದೇ ದಾರಿಯಲ್ಲಿ ನಾವುಗಳು ನಡೆಯೋಣ. ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗೋಣ. **"ಸಂಯುಕ್ತ ಸಹಕಾರಿ ನಡೆ ಗುಣ ಮಟ್ಟದ ಕಡೆ"** ಎಂಬ ಧ್ಯೇಯದ ಕಾರ್ಯ ಸಾಧನೆಗೆ ಈ ಸಂಪರ್ಕ ಸಭೆಗಳು ಸಾಧನವಾಗಿವೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–20
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 21–24
ಲೇಖನಗಳು :
ಕರ್ನಾಟಕ ಸೌಹಾರ್ದ ಕಾಯಿದೆಯಡಿ ಸಹಕಾರಿಗಲ ಶಾಸನಬದ್ಧ ವಿಚಾರಣೆ – ಒಂದು ವಿಮರ್ಷೆ ......................... 25–27
ಚಂದ್ರಯಾನ–3 ಯಶಸ್ವಿಯ ಹಿಂದೆ ನಾರಿ ಶಕ್ತಿ – ರಾಕೆಡ್ ವುಮನ್ಸ್ ...................... 28–29
76ನೇ ಸ್ವಾತಂತ್ರ್ಯ ಮಹೋತ್ಸವದ ಆಚರಣೆಯ ಹೆಮ್ಮೆ – ವಿಶೇಷತೆಗಳು ......................... 33

# ಸಂಪಾದಕೀಯ

## ರಾಜ್ಯದ ಸಹಕಾರಿ ಕಾಯ್ದೆಗಳ ತಿದ್ದುಪಡಿಗಾಗಿ ಸಮಿತಿ ರಚನೆ – ಸರ್ಕಾರದ ಕಾಳಜಿ ಹಾಗು ಬದ್ಧತೆ ಶ್ಲಾಘನೀಯ.

ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿ ಎರಡು ಸಹಕಾರ ಕಾಯ್ದೆಗಳಿವೆ, ಮೊದಲನೇಯದು 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, ಈ ಕಾಯ್ದೆಯಡಿಯಲ್ಲಿ 45000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಎರಡನೇಯದು 1997ರ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ಈ ಕಾಯ್ದೆಯಡಿಯಲ್ಲಿ 5990 ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಎರಡೂ ಕಾಯ್ದೆಗಳಲ್ಲಿ ಹಲವಾರು ಆಡಳಿತಾತ್ಮಕ ತೊಂದರೆಗಳನ್ನು ಗಮನಿಸಿದ ಸರ್ಕಾರ ಈ ತೊಂದರೆಗಳನ್ನು ನಿವಾರಿಸಲು ಈ ಎರಡೂ ಕಾಯ್ದೆಗಳಿಗೆ ಕೆಲವು ಅಗತ್ಯ ತಿದ್ದುಪಡಿಗಳನ್ನು ಮಾಡಲು ಉದ್ದೇಶಿಸಿರುವುದು ಸರ್ಕಾರ ಸಹಕಾರಿ ಚಳುವಳಿಯ ಅಭಿವೃದ್ಧಿಯ ಬಗ್ಗೆ ಇರುವ ಆಸಕ್ತಿ, ಕಾಳಜಿ ಬದ್ದತೆ ಶ್ಲಾಘನೀಯ.

ಸನ್ಮಾನ್ಯ ಶ್ರೀ ಕೆ ಎನ್ ರಾಜಣ್ಣನವರು ರಾಜ್ಯದ ಅತ್ಯಂತ ಹಿರಿಯ ಸಹಕಾರಿಗಳು ಸಹಕಾರಿ ಕ್ಷೇತ್ರದ ಚುಕ್ಕಾಣಿಯನ್ನು ಹಿಡಿದು ಸರ್ಕಾರದಲ್ಲಿ ಸಹಕಾರ ಸಚಿವರಾಗಿರುವುದು ಸಹಕಾರಿ ಕ್ಷೇತ್ರಕ್ಕೆ, ಸಹಕಾರಿಗಳಿಗೆ ಹೆಮ್ಮೆ ತಂದಿದೆ. ಅವರ ನೇತೃತ್ವದಲ್ಲಿ ಸಹಕಾರ ಕ್ಷೇತ್ರ ಅಭಿವೃದ್ಧಿ ಹೊಂದಲು ಪೂರಕವಾಗುವಂತಹ ತಿದ್ದುಪಡಿಗಳನ್ನು ಸಹಕಾರಿ ಕಾಯ್ದೆಗಳಲ್ಲಿ ಅಳವಡಿಸುತ್ತಾರೆ ಎಂಬುದು ಸಹಕಾರಿಗಳ ದೃಢವಿಶ್ವಾಸ. ಸಹಕಾರಿ ಕ್ಷೇತ್ರಕ್ಕೆ 119 ವರ್ಷಗಳ ಇತಿಹಾಸವಿದೆ. ಪ್ರಾರಂಭದಿಂದ ಇದುವರೆಗೆ ಈ ಸಹಕಾರ ಕ್ಷೇತ್ರ ಹಲವಾರು ಏರು ಪೇರುಗಳನ್ನು ಕಂಡಿದೆ. ಬದಲಾವಣೆ ಜಗದ ನಿಯಮ ಎಂಬಂತರ ಸಹಕಾರಿ ಚಳುವಳಿ ಯಾವುದೇ ಒಂದು ವಿಷಯಕ್ಕೆ ಸೀಮಿತವಾಗಿರದೆ ದೇಶದ ರೈತರ, ಹಿಂದುಳಿದ ವರ್ಗದವರ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ, ಆರ್ಥಿಕ ದುರ್ಬಲರ ಸರ್ವಾಂಗೀಣ ಅಭಿವೃದ್ಧಿಗಾಗಿ ಬದಲಾವಣೆಗಳನ್ನು ಅನುಕರಿಸುತ್ತಾ, ಅಳವಡಿಸುತ್ತಾ ಈ ದೇಶದ ಪ್ರಭಲ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಗಮನಿಸಿದ ಸರ್ಕಾರ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಪ್ರಾರಂಬಿಸಿರುವುದು ಸಹಕಾರಿ ಕ್ಷೇತ್ರದ ಮಹತ್ವವನ್ನು ಸಾರಿ ಹೇಳುತ್ತಿದೆ.

ಪ್ರಸಕ್ತ ಕರ್ನಾಟಕ ಸರ್ಕಾರವು ಸಹ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ, ರಾಜ್ಯದ ರೈತರ, ಹಿಂದುಳಿದ ವರ್ಗದವರ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ, ಆರ್ಥಿಕ ದುರ್ಬಲರ, ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಅನುಕೂಲವಾಗುವಂತೆ ಸಹಕಾರಿ ಕಾಯ್ದೆಗಳನ್ನು ತಿದ್ದಪಡಿ ಮಾಡಲು ತೆಗೆದುಕೊಂಡಿರುವ ಕ್ರಮ ಸ್ವಾಗತಾರ್ಹ. ಈ ಸಮಿತಿಯಲ್ಲಿಯೂ ಸಹ ಅತ್ಯಂತ ಅನುಭವಿ ಹಾಗು ಹಿರಿಯ ಸಹಕಾರಿಗಳಾದ ಈ ಸಮಿತಿಯ ಅಧ್ಯಕ್ಷರಾಗಿ ಮಾಜಿ ಸಹಕಾರ ಸಚಿವರಾದ ಹಾಗು ಹಾಲಿ ಶಾಸಕರಾದ ಶ್ರೀ ಲಕ್ಷ್ಮಣ ಸವಧಿಯವರು, ಸದಸ್ಯರಾಗಿ ಮಾಜಿ ಸಹಕಾರ ಸಚಿವ ಹಾಗೂ ಹಾಲಿ ಶಾಸಕ ಶ್ರೀ ಜಿ.ಟಿ.ದೇವೇಗೌಡ, ಮಾಜಿ ಸಚಿವರಾದ ಶ್ರೀ ಎಸ್. ಆರ್.ಪಾಟೀಲ್, ಮಾಜಿ ಸಚಿವ ಹಾಗೂ ಹಾಲಿ ಶಾಸಕ ಶ್ರೀ ಶಿವರಾಮ ಹೆಬ್ಬಾರ, ಶಾಸಕ ಶ್ರೀ ಕೆ. ಷಡಕ್ಷರಿ, ವಿಧಾನ ಪರಿಷತ ಸದಸ್ಯ ಶ್ರೀ ರಾಜೇಂದ್ರ ರಾಜಣ್ಣ, ಹಿರಿಯ ಸಹಕಾರಿ ಹಾಗು ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಮ್.ಎನ್, ರಾಜೇಂದ್ರಕುಮಾರ, ಸಹಕಾರಿ ಇಲಾಖೆಯ ನಿವೃತ್ತ ಅಪರನಿಬಂಧಕರಾದ ಶ್ರೀ ಎಚ್. ಎಸ್.ನಾಗರಾಜಯ್ಯ, ಶ್ರೀ ರಮಣರೆಡ್ಡಿ, ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಪದನಿಮಿತ್ಯ ಜಂಟಿ ಕಾರ್ಯದರ್ಶಿಗಳು ಹಾಗು ಕರ್ತವ್ಯಾಧಿಕಾರಿ (ಓಎಸ್‌ಡಿ) ಸಹಕಾರಿ ಇಲಾಖೆಯ ಅಪರ ನಿಬಂಧಕರಾದ ಶ್ರೀ ದಿವಾಕರರವರು ಸಮಿತಿಯ ಕಾರ್ಯದರ್ಶಿಯಾಗಿದ್ದಾರೆ. ಇವರುಗಳು ನೀಡುವ ಸಲಹೆ ಹಾಗು ಮಾರ್ಗದರ್ಶನಗಳು ಮುಂಬರುವ ದಿನಗಳಲ್ಲಿ ಸಹಕಾರಿ ಕಾಯ್ದೆಗಳನ್ನು ಜನಪರ ಹಾಗು ಅಭಿವೃದ್ಧಿಪರ ಕಾಯ್ದೆಗಳನ್ನಾಗಿ ಮಾಡುವುದಕ್ಕೆ ಸಹಕಾರಿಯಾಗಲಿದೆ ಎಂದು ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗು ರಾಜ್ಯದ ಸಹಕಾರಿಗಳ ಆಶಯವಾಗಿದೆ.

ಈ ಸಮಿತಿಯ ಕಾರ್ಯನಿರ್ವಹಣೆಗೆ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗು ರಾಜ್ಯದ ಸೌಹಾರ್ದ ಸಹಕಾರಿಗಳು ಸಂಪೂರ್ಣ ಸಹಕಾರವನ್ನು ನೀಡಲ್ಲಿದ್ದಾರೆ. ಈ ಸಮಿತಿಯ ಶಿಫಾರಸ್ಸುಗಳು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮತ್ತು ದೇಶದ ಏಕೈಕ ಶಾಸನಬದ್ದ ಸಂಸ್ಥೆಯಾದ ಸಂಯುಕ್ತ ಸಹಕಾರಿಯ ಕಾರ್ಯಶೈಲಿಗೆ ದಿಕ್ಸೂಚಿಯಾಗಲಿದೆ ಎಂದು ಆಶಿಸಲಾಗುತ್ತಿದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಯೌಗಿಕ ಸಾಧನೆ"

ಮನುಷ್ಯ ತನ್ನ ಬುದಕಿನ ಗುರಿಯನ್ನು ತಲುಪುವುದಕ್ಕಾಗಿ, ತಾನು ಬಯಸಿದ್ದನು ಪಡೆಯುವುದಕ್ಕಾಗಿ ಪರಿಶ್ರಮಿಸುತ್ತಾನೆ. ಅದರಲ್ಲಿ ಅವನು ಸಾರ್ಥಕತೆಯನ್ನು ಕಾಣುತ್ತಾನೆ. ಇಡೀ ಬುದಕಿಗೆ ಒಂದೇ ಧ್ಯೇಯ ಇರಬಹುದು. ಬುದಕಿನ ಒಂದೊಂದು ಹಂತದಲ್ಲಿ ಒಂದೊಂದು ಧ್ಯೇಯ ಇರಬಹುದು. ಈ ಧ್ಯೇಯಗಳಲ್ಲಿ ಮೂರು ವಿಧಗಳು : ಲೌಕಿಕ, ಯೌಗಿಕ, ಹಾಗೂ ಪಾರಮಾರ್ಥಿಕ, ಈ ಮೂರು ಸಾಧ್ಯಗಳ ಸಾಧನೆಯ ಬಯಕೆ ಎಲ್ಲರಲ್ಲಿ ಇರುತ್ತದೆ.

ಲೌಕಿಕ ಬಯಕೆಗಳಲ್ಲಿ ಎರಡು ರೀತಿ 1. ಇಡೀ ಜೀವನಕ್ಕೆ ಸಂಬಂಧಿಸಿದ್ದು 2. ನಿರ್ದಿಷ್ಟ ಕಾಲಾವಧಿಗೆ ಸಂಬಂಧಿಸಿದ್ದು ಇಲ್ಲಿ ಕಾಲಾವಧಿಗೆ ಸಂಬಂಧಿಸಿದ ಸಣ್ಣ ಸಣ್ಣ ಬಯಕೆಗಳನ್ನು ಸ್ವಲ್ಪ ಪರಿಶ್ರಮ ಪಟ್ಟರೆ ಈಡೇರಿಸಿಕೊಳ್ಳಬಹುದು. ಆದರೆ ಜೀವನಕ್ಕೆ ಸಂಬಂಧಿಸಿದ, ಇಡೀ ಜೀವನವನ್ನೇ ವ್ಯಾಪಿಸಿದ ಕೆಲ ಬಯಕೆಗಳಿರುತ್ತದೆ. ಇವುಗಳ ಈಡೇರಿಕೆಗಾಗಿ ಮನುಷ್ಯ ಬಹಳ ಪರಿಶ್ರಮ ಪಡುತ್ತಾನೆ. ತಪಸ್ಸನ್ನೇ ಮಾಡುತ್ತಾನೆ. ಏನಾದರೂ ಸಾಧಿಸಬೇಕೆಂದರೆ ತಪಸ್ಸು ಮಾಡಲೇಬೇಕು. ಒಂದು ನೀರಿನ ಹನಿ ಸಮುದ್ರ ಸೇರಲು ಎಷ್ಟು ಕಷ್ಟ ಪಡುತ್ತದೆ! ಕಲ್ಲಿನ ಮೇಲೆಯೋ, ಹುಲ್ಲಿನ ಮೇಲೆಯೋ ಬಿದ್ದ ಆ ಹನಿಗೆ ಸಾಗರವನ್ನು ನೋಡಬೇಕು. ಅದನ್ನು ಕೂಡಬೇಕು ಅಂತ ಅನ್ನಿಸುತ್ತದೆ. ಆದರೆ ಇದು ಸುಲಭ ಅಲ್ಲ. ಆ ಹನಿ ಬೆಟ್ಟ ಗುಡ್ಡಗಳನ್ನು ದಾಡಿ, ಸಾವಿರಾರು ಕಿಲೋ ಮೀಟರ್ ಕ್ರಮಿಸಿ ಕೊನೆಗೊಮ್ಮೆ ಸಾಗರವನ್ನು ಸೇರುತ್ತದೆ. ಆ ಹನಿಯ ಜೀವನದ ಧ್ಯೇಯವೇ ಸಾಗರವನ್ನು ಕೂಡವುದು. ಯಾವಾಗ ಅದರ ಧ್ಯೇಯ ಪೂರ್ಣವಾಗುತ್ತದೆಯೋ ಬಹಳ ಸಂತಸ ಪಡುತ್ತದೆ. ತನ್ನನ್ನು ತಾನು ಮರೆತುಬಿಡುತ್ತದೆ. ಇದೇ ತಪಸ್ಸು!

ಇದೇ ರೀತಿ ಮನುಷ್ಯ ಕೂಡ ಆ ಲೋಕದಲ್ಲಿ ಏನನ್ನಾದರೂ ಸಾಧಿಸಬೇಕೆಂದರೆ ಬಹಳ ಕಷ್ಟ ಪಡಬೇಕಾಗುತ್ತದೆ. ಭಗೀರಥನಿಗೆ ಗಂಗೆಯನ್ನು ಭೂಮಿಗೆ ತರಬೇಕೆಂಬ ಕನಸು. ಎಂಥ ಉದಾತ್ತ ಕನಸು! ಅದು ತನಗಾಗಿ ಅಲ್ಲ. ಮನುಕುಲದ ಒಳಿತಿಗಾಗಿ. ಇಡೀ ಭೂಮಿ ಹಚ್ಚ ಹಸಿರಾಗಬೇಕು. ಆಕಾಶದ ನೀರೆಲ್ಲ ಕಳಗಿಳಿದು ಗಂಗೆಯಾಗಿ ಹರಿಯಬೇಕು. ಆರ್ಯಾವರ್ತ (ಭಾರತ ವರ್ಷ) ಹಸಿರಿನಿಂದ ತುಂಬಬೇಕು. ವನಸಿರಿ ಸಮೃದ್ಧವಾಗಬೇಕು ಎಂಬ ಕನಸು ಕಂಡ. ಅದಕ್ಕಾಗಿ ಘೋರ ತಪಸ್ಸನ್ನು ಆರಂಭಿಸಿದ. ಆಕಾಶದಿಂದ ಭೂಮಿಗೆ ಗಂಗೆಯನ್ನು ತಂದ ಸಂತಸ ಪಟ್ಟ. ಆ ಗಂಗೆ ಇಂದಿಗೂ ಭಾರವನ್ನು ಸಿರಿವಂತವಾಗಿಸಿದ. ಮನುಷ್ಯ ಕೇವಲ ಉಣ್ಣುವುದು, ತಿನ್ನುವುದಕ್ಕಾಗಿ ಬದುಕಬಾರದು. ಏನನ್ನಾದರೂ ಮಾಡಬೇಕು. ಸಾಧಿಸಬೇಕು, ತನಗಾಗಿ ಮಾಡುವುದು ವೈಯಕ್ತಿಕ ಧ್ಯೇಯ, ಎಲ್ಲರಿಗಾಗಿ ಮಾಡುವುದು ಉದಾತ್ತ ಧ್ಯೇಯ,

ಮನುಷ್ಯ ಸಣ್ಣ ಸಣ್ಣ ಕನಸುಗಳೊಂದಿಗೆ ಕೆಲವು ಸಲ ದೊಡ್ಡ ಕನಸನ್ನೂ ಕಾಣಬೇಕು. ತೇನ್ಸಿಂಗ್ ಒಬ್ಬ ಸಾಮಾನ್ಯ ಬಡ ಹುಡುಗ, ಅವನು ಎವೆರೆಸ್ಟ್ ಶಿಖರವನ್ನು ನೋಡಿ ಅದನ್ನು ಒಂದು ದಿನ ಏರಬೇಕೆಂಬ ಕನಸು ಕಂಡ. ಅದು ಸಾದಾ ಬೆಟ್ಟ ಅಲ್ಲ, ಜಗತ್ತಿನಲ್ಲಿಯೇ ಅತ್ಯಂತ ಎತ್ತರವಾದ ಶಿಖರ, ಹಿಮದಿಂದ ಆವೃತವಾದ ಶಿಖರ, ಅಲ್ಲಿ ಚಳಿ ಗಾಳಿ: ಉಸಿರಾಟಕ್ಕೂ ತೊಂದರೆ: ನೋಡಿದಲ್ಲೆಲ್ಲಾ ಬಿಳಿ ಹಿಮ; ವಿಪರೀತ ವಾತಾವರಣ. ಅಲ್ಲಿಯವರೆಗೆ ಒಬ್ಬ ಮನುಷ್ಯನೂ ಆ ಹಿಮಬೆಟ್ಟವನ್ನು ಏರುವ ಸಾಹಸ ಮಾಡಿರಲಿಲ್ಲ. ಆದರೆ ತೇನ್ಸಿಂಗನಿಗೆ ಅದನ್ನು ಏರಬೇಕು ಅನಿಸಿತು. ಅವನ ತಾಯಿ ಪ್ರೋತ್ಸಾಹಿಸಿದಳು. ಅವನು ದಿನವೂ ಏರಲಾರಂಭಿಸಿದ ಸುಮಾರ 20 ವರ್ಷಗಳ ಪ್ರಯತ್ನ ಬಳಿಕ 1953ರಲ್ಲಿ ಎಡ್‌ಮಂಡ್ ಹಿಲೇರಿಯೊಂದಿಗೆ ಶಿಖರದ ತುಟ್ಟ ತುದಿಯನ್ನು ತಲುಪಿಯೇ ಬಿಟ್ಟು ಇಡೀ ಜಗತ್ತು ಅವರನ್ನು ಕೊಂಡಾಡಿತು. ಭಾರತದ ಅಸ್ಮತೆಯನ್ನು ಹೆಚ್ಚಿಸಿದ ತೇನ್ಸಿಂಗ್, ಎಂತಹ ಕಷ್ಟ ಬಂದರೂ ತನ್ನ ಗುರಿಯನ್ನು ಬಿಡದೇ ಸಾಧಿಸುವ ಮನುಷ್ಯ ವೀರ ಈ ಗುಣವನ್ನು ಮಕ್ಕಳಲ್ಲಿ ಬೆಳೆಸಬೇಕು.

ಕೆಲವು ಸಲ ನಮ್ಮ ಕೈ, ಕಣ್ಣು, ದೇಹ, ಮನಸ್ಸುಗಳು ಹೊಲಸಾಗುತ್ತವೆ. ಆದರೆ ಒಳಗಿರುವ ಋಷಿ ಸತ್ವವನ್ನು ಗುರುತಿಸಿದ ಕ್ಷಣವೇ ಬದಲಾವಣೆ ಸಾಧ್ಯ. ಯಾರೂ ತಮ್ಮನ್ನು ತಾವು ಕೀಳು, ಸಣ್ಣವನೆಂದು ಭಾವಿಸಿದೆ, ನಾನು ಒಳ್ಳೆಯವ, ಸಂತ ಜ್ಞಾನಿ ಎಂದು ಭಾವಿಸಬೇಕು. ಪ್ರತಿದಿನ ಕನಸು ಕಾಣಬೇಕು. "ಭಗವಂತನೇ ನಾನು ಸಶಕ್ತ, ನನ್ನನ್ನು ಅನುಗ್ರಹಿಸು, ನನ್ನ ಬುದ್ಧಿಯ ಬೆಳಕು ಎಲ್ಲೆಡೆ ಹರಡಲಿ' ಎಂದು ಬಂದಿಷ್ಟು ಪ್ರಾರ್ಥನೆ ಮಾಡಬೇಕು. ಶರೀರಕ್ಕೆ ಯಾವುದು ಸಾಧ್ಯವಿಲ್ಲವೋ ಅದನ್ನು ಸಾಧಿಸುವ ಸಾಮರ್ಥ್ಯ ಮನಸ್ಸಿಗಿದೆ; ನಿಸರ್ಗ ಅದನ್ನು ಕೊಟ್ಟಿದೆ. ಇಂತಹ ಸಾಮಥ್ಯವನ್ನು ಗುರುತಿಸಿ ಅದನ್ನು ವ್ಯಕ್ತ ಮಾಡುವುದೇ 'ಯೌಗಿಕ ಸಾಧನೆ" ಮನಸ್ಸು ಮಾಡಿದರೆ ಎಲ್ಲರೂ 'ಯೋಗಿ'ಗಳೇ!

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 29,549 ಆಗಿರುತ್ತದೆ. ಇವುಗಳ ಪೈಕಿ 20,611 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,499.

**ಜುಲೈ ತಿಂಗಳ ಪ್ರಕರಣಗಳು :** ದಾವಾಪ್ರಕರಣ 561 ಇತ್ಯರ್ಥಗೊಂಡ ಪ್ರಕರಣಗಳು 621

**ಅಮಲ್ಜಾರಿ ಪ್ರಕರಣಗಳು :** ಒಟ್ಟು 57,363 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,497 ಪ್ರಕರಣಗಳು ಇತ್ಯರ್ಥಗೊಂಡಿದ್ದು. 5,866 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜುಲೈ ತಿಂಗಳಿನಲ್ಲಿ 55 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆ
## 29ನೇ ಆಗಸ್ಟ್ 2023

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 22ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 29 ಆಗಸ್ಟ್ 2023, ಮಂಗಳವಾರದಂದು ಪ್ರಿನ್ಸೆಸ್ ಗಾಲ್ಫ್, ಗೇಟ್ ಸಂಖ್ಯೆ–09, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080 ಇಲ್ಲಿ **ಬೆಳಿಗ್ಗೆ 10:00 ಗಂಟೆಗೆ** ಕರೆಯಲಾಗಿದೆ. ಸಭೆಯ ನೋಟೀಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ನೋಂದಾಯಿತ ಪಾರ್ಸಲ್ ಮೂಲಕ ಕಳುಹಿಸಲಾಗಿದೆ. ಸಭೆಯ ಅಜೆಂಡಾ. ಟಿಪ್ಪಣಿಗಳು ಮತ್ತು ಅರ್ಹ ಸದಸ್ಯರ ಪಟ್ಟಿಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

ಈ ಸಭಾಂಗಣದ ಆವರಣದಲ್ಲಿ ತಾಂತ್ರಿಕ ಮೇಳ ಹಾಗೂ ಸೌಹಾರ್ದ ಸಹಕಾರಿಗಳ ಉತ್ಪಾದಿತ ವಸ್ತುಗಳ ಮಾರಾಟ ಹಾಗೂ ಪ್ರದರ್ಶಿನಿಯನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಆಸಕ್ತರು ಸಂಯುಕ್ತ ಸಹಕಾರಿಯ ಅಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಮಳಿಗೆಯನ್ನು ಕಾಯ್ದಿರಿಸಿಕೊಳ್ಳಲು ಕ್ರಮವಿಡುವುದು.

ಸಭೆಯಲ್ಲಿ 5 ಉತ್ತಮ ಸಹಕಾರಿ ಸಂಸ್ಥೆ ಹಾಗೂ ಶ್ರೇಷ್ಠ ಸಹಕಾರಿ ವ್ಯಕ್ತಿ ಮತ್ತು 2022ನೇ ಸಾಲಿನ ಕರ್ನಾಟಕ ಸರಕಾರದ ಪ್ರತಿಷ್ಠಿತ 20 ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಲಾಗುವುದು. ಈ ಸಾಮಾನ್ಯ ಸಭೆಯ ನಂತರದಲ್ಲಿ ದೇಶದ ಉದ್ದೇಶಿತ “ರಾಷ್ಟ್ರೀಯ ಸಹಕಾರಿ ನೀತಿ” ಮುಖ್ಯಾಂಶಗಳು ಕುರಿತಂತೆ ಉಪನ್ಯಾಸದ ವ್ಯವಸ್ಥೆ ಮಾಡಲಾಗುತ್ತಿದೆ.

## 22ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು
### ದಿನಾಂಕ 29 ಆಗಸ್ಟ್ 2023, ಮಂಗಳವಾರ

**ಮಾನ್ಯರೇ,**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 22ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ 29 ಆಗಸ್ಟ್ 2023, ಮಂಗಳವಾರದಂದು ಪ್ರಿನ್ಸೆಸ್ ಗಾಲ್ಫ್, ಗೇಟ್ ಸಂಖ್ಯೆ–09, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080** ಇಲ್ಲಿ ಬೆಳಿಗ್ಗೆ 10:00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

**ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು:**

1. 22ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 21ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.
3. 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು.
4. 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸುವುದು.
5. 2022–23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
6. 2022–23ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
7. 2023–24ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
8. 2024–25ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
9. 2023–24ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
10. 2023–24ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
11. 2024–25ನೇ ಸಾಲಿನ ಕರಡು ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
12. 2024–25ನೇ ಸಾಲಿನ ಕರಡು ಮುಂಗಡ ಪತ್ರವನ್ನು ಅನುಮೋದಿಸುವುದು.
13. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ ಕಾನೂನಾತ್ಮಕ ತಿದ್ದುಪಡಿಗಳನ್ನು ಸೂಚಿಸುವ ಕುರಿತು ರಚನೆಯಾಗಿರುವ ಸಮಿತಿಯ ಬಗ್ಗೆ.
14. ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) ಕೋರ್ಸಿನ ಕುರಿತು.
15. ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಬಗ್ಗೆ ಆಗಿರುವ ಬೆಳವಣಿಗೆಗಳ ಕುರಿತು.

16. ಸಂಯುಕ್ತ ಸಹಕಾರಿಯು ಇತರೆ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ಕುರಿತು.
17. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.
18. ಸೌಹಾರ್ದ ಸಹಕಾರಿಗಳ ಗುಣಾತ್ಮಕ ಬೆಳವಣಿಗೆಗಾಗಿ ಠೇವಣಿ ಮತ್ತು ಸಾಲಗಳ ಮೇಲೆ ವಿಧಿಸುವ ಬಡ್ಡಿದರ ನಿಗದಿಪಡಿಸಿರುವ ಸುತ್ತೋಲೆ ಕುರಿತು.
19. ಸೌಹಾರ್ದ ಸಹಕಾರಿ ಕಾಯ್ದೆ ಕಲಂ 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ.

    ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್–ಕೆ) ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಪರಿಗಣನೆ.

20. ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.
21. ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.
22. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.
23. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ.
24. ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.
25. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ಥಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ಥಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.
26. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.
27. ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.
28. ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.
29. 65ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.
30. ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.
31. ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.
32. ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿ ಕುರಿತು.
33. ಸಂಯುಕ್ತ ಸಹಕಾರಿಯ ಸಿಬ್ಬಂದಿ ಸೇವಾ ನಿಯಮಾವಳಿಗಳ ತಿದ್ದುಪಡಿ ಕುರಿತು.
34. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.
35. ಸಂಯುಕ್ತ ಸಹಕಾರಿಯ ಸಮಾಪನ.
36. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.
37. ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

**ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,**
**ವಂದನೆಗಳೊಂದಿಗೆ,**

**ಇಂತಿ ತಮ್ಮ ವಿಶ್ವಾಸಿ**

(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕ**

**ಸ್ಥಳ : ಬೆಂಗಳೂರು**
**ದಿನಾಂಕ : 03.08.2023**

Karnataka State Souharda Federal Cooperative Ltd. Reg. No. RSR / SOU / ACT / 136 Regn 051 / 2001-02 dated 04-01-2002 Bangalore

## ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ವಿಶೇಷ ಮಾಹಿತಿ

- ಸಭೆಯ ನೋಟಿಸನ್ನು ಎಲ್ಲಾ ಅರ್ಹ ಸಹಕಾರಿಗಳಿಗೆ ದಿನಾಂಕ 03.08.2023 ರಂದು ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿದೆ. ಸಭೆಗೆ ಬರುವಾಗ ಸಭೆಯ ನೋಟೀಸನ್ನು ತಪ್ಪದೇ ತರುವುದು.
- ಎಲ್ಲಾ ಸೌಹಾರ್ದ ಸಹಕಾರಿಗಳೂ ಕೂಡ ಸಂಯುಕ್ತ ಸಹಕಾರಿಯ ಸದಸ್ಯರು. ಪ್ರತಿವರ್ಷ ನಡೆಯುವ ಸಾಮಾನ್ಯ ಸಭೆಯಲ್ಲಿ ನಡೆಯುವ ಚರ್ಚೆ, ತೆಗೆದುಕೊಳ್ಳುವ ನಿರ್ಣಯಗಳು ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತವೆ. ಈ ಮಹತ್ವದ ಸಭೆಯಲ್ಲಿ ಭಾಗವಹಿಸುವ ಮೊದಲು, ಎಲ್ಲಾ ಅರ್ಹ ಸಹಕಾರಿಗಳ ಡೆಲಿಗೇಟುಗಳು ಸಭೆಯ ಅಜೆಂಡಾ ಮತ್ತು ಟಿಪ್ಪಣಿಗಳನ್ನು ಅಧ್ಯಯನ ಮಾಡಿಕೊಂಡು ಬರುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಲು ಕೋರಿದೆ.
- ಅಧಿಕೃತ ಡೆಲಿಗೇಟುಗಳನ್ನು ಹೊರತುಪಡಿಸಿ, ಯಾವುದೇ ವೀಕ್ಷಕರಿಗೂ ಹಾಗೂ ಡೆಲಿಗೇಟುಗಳೊಂದಿಗೆ ಬರುವ ಯಾವುದೇ ಸದಸ್ಯರಿಗೂ ಸಭೆಯ ಕಾರ್ಯ–ಕಲಾಪಗಳಲ್ಲಿ ಪಾಲ್ಗೊಳ್ಳಲು ಅವಕಾಶ ಇರುವುದಿಲ್ಲ. ಸಾಮಾನ್ಯ ಸಭೆಯ ಅಧಿಕೃತ ಕಾರ್ಯ–ಕಲಾಪ ಮುಕ್ತಾಯವಾದ ನಂತರದ ಕಾರ್ಯಕ್ರಮಗಳಲ್ಲಿ ವೀಕ್ಷಕರು ಹಾಗೂ ಇತರೆ ಸಹಕಾರಿಗಳು ಭಾಗವಹಿಸಲು ಮುಕ್ತ ಅವಕಾಶ ಇರುತ್ತದೆ.
- ಸಭೆಯಲ್ಲಿ ಪ್ರಶ್ನೆ ಕೇಳಬಯಸುವ ಸದಸ್ಯರು ದಿನಾಂಕ 22.08.2023ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಿಗೆ ತಮ್ಮ ಪ್ರಶ್ನೆಯನ್ನು ನೀಡಬಹುದು. ಹೆಚ್ಚಿನ ವಿವರಗಳಿಗೆ ಸಾಮಾನ್ಯ ಸಭೆ ನಡೆಸುವ ನಿಯಮಾವಳಿಗಳನ್ನು ಗಮನಿಸುವುದು.
- ವಾರ್ಷಿಕ ವರದಿ ಪುಸ್ತಕದ ಕೊನೆಯಲ್ಲಿ ಸಭೆ ನಡೆಸುವ ರೀತಿ, ನೀತಿ ಮತ್ತು ನಡವಳಿಗಳನ್ನು ಮುದ್ರಿಸಲಾಗಿದೆ. ಅದನ್ನು ಗಮನಿಸಿ ಮತ್ತು ಪಾಲಿಸುವ ಮೂಲಕ, ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯನ್ನು ಸುಗಮವಾಗಿ, ವ್ಯವಸ್ಥಿತವಾಗಿ, ಹೆಚ್ಚು ಅರ್ಥ ಪೂರ್ಣವಾಗಿ ಮತ್ತು ಯಶಸ್ವಿಯಾಗಿ ನಡೆಸಲು ಸಹಕರಿಸಲು ಕೋರಿದೆ.

## ಸಾಮಾನ್ಯ ಸಭೆಯ ದಿನದ ಕಾರ್ಯಕ್ರಮಗಳು

- **ಊಟೋಪಚಾರ :** ಬೆಳಿಗ್ಗೆ ಉಪಹಾರ (ಬೆಳಿಗ್ಗೆ 8.30 ಗಂಟೆಯಿಂದ 10.30 ಗಂಟೆಯವರೆಗೆ), ಮಧ್ಯಾಹ್ನದ ಭೋಜನ (ಮಧ್ಯಾಹ್ನ 1 ಗಂಟೆಯಿಂದ 3 ಗಂಟೆಯ ರವರೆಗೆ) ಮತ್ತು ಸಾಯಂಕಾಲ 4 ಗಂಟೆಗೆ ಲಘು ಉಪಹಾರ, ಚಹಾ/ಕಾಫಿ ವ್ಯವಸ್ಥೆ ಇರುತ್ತದೆ.
- **ಪ್ರಶಸ್ತಿ ವಿತರಣಾ ಕಾರ್ಯಕ್ರಮ :** ಸಾಮಾನ್ಯ ಸಭೆಯ ಅಧೀಕೃತ ಕಾರ್ಯ ಕಲಾಪಗಳು ಮುಗಿದ ನಂತರ, ರಾಜ್ಯದ ಉತ್ತಮ ಸೌಹಾರ್ದ ಸಹಕಾರಿ ಸಂಘ ಹಾಗೂ ಶ್ರೇಷ್ಠ ಸಹಕಾರಿಗಳಿಗೆ ಪ್ರಶಸ್ತಿ ವಿತರಣಾ ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿನ ಸಹಕಾರ ರತ್ನ ಪುರಸ್ಕೃತರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿರುವ ನೂತನವಾಗಿ ಆಯ್ಕೆಯಾದ ಮಾನ್ಯ ಶಾಸಕರುಗಳಿಗೆ ಸನ್ಮಾನ.
- **ತಂತ್ರಜ್ಞಾನ ಮೇಳ :** ಸಾಮಾನ್ಯ ಸಭೆಯ ಸ್ಥಳದ ಆವರಣದಲ್ಲಿ ತಂತ್ರಾಂಶ (software) ಪೂರೈಕೆದಾರರು, ವಿವಿಧ ರೀತಿಯ ವಿಮಾ ಉತ್ಪನ್ನಗಳು ಅಥವಾ ಬಡ್ಡಿಯೇತರ ಆದಾಯಗಳಿಗೆ ಸಂಬಂಧಿಸಿದ ಸೇವಾ ಪೂರೈಕೆದಾರರು, ತಂತ್ರಜ್ಞಾನ (Technology) ಹಾಗೂ ಸುರಕ್ಷತಾ (security) ಉಪಕರಣಗಳ ಪೂರೈಕೆದಾರರು ತಮ್ಮ ಸೇವೆ/ಉಪಕರಣಗಳ ಮಾಹಿತಿ ಮಳಿಗೆಗಳನ್ನು ತೆರೆಯಲಿದ್ದು ಸಹಕಾರಿಗಳು ಸದರಿ ಮಳಿಗೆಗಳಿಗೆ ಭೇಟಿ ನೀಡುವ ಮೂಲಕ ಅಗತ್ಯ ಮಾಹಿತಿಗಳನ್ನು ಪಡೆಯಬಹುದಾಗಿದೆ.
- **ಮಾರಾಟ ಮಳಿಗೆ :** ಸಾಮಾನ್ಯ ಸಭೆಯ ಸ್ಥಳದ ಆವರಣದಲ್ಲಿ ಸಂಯುಕ್ತ ಸಹಕಾರಿಯ ಎಲ್ಲ ಪ್ರಕಟಣೆಗಳ ಮಾರಾಟ ಮಳಿಗೆಯ ವ್ಯವಸ್ಥೆ ಇರುತ್ತದೆ.
- **ಉಪನ್ಯಾಸ :** ಸಾಮಾನ್ಯ ಸಭೆಯ ಅಧೀಕೃತ ಕಾರ್ಯ ಕಲಾಪಗಳು ಮುಗಿದ ನಂತರ "ರಾಷ್ಟ್ರೀಯ ಸಹಕಾರಿ ನೀತಿ" ಕುರಿತು ಉಪನ್ಯಾಸ.

**ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಬಿಡುವು ಮಾಡಿಕೊಂಡು, ಸಾಮಾನ್ಯ ಸಭೆಯ ಕಲಾಪದ ಜೊತೆಗೆ ದಿನದ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕೋರಿದೆ.**

## ಸಹಕಾರಿ ಕಾಯ್ದೆಗಳ ಅಗತ್ಯ ತಿದ್ದುಪಡಿಗಾಗಿ ಶ್ರೀ ಲಕ್ಷ್ಮಣ ಸವದಿ ನೇತೃತ್ವದಲ್ಲಿ ಸಮಿತಿ

ಪ್ರಸಕ್ತ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ 1997 ರ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮವನ್ನು ಅಧ್ಯಯನ ಮಾಡಿ ಅಗತ್ಯ ತಿದ್ದುಪಡಿಗಳನ್ನು ಸೂಚಿಸುವುದಕ್ಕಾಗಿ ಮಾಜಿ ಉಪಮುಖ್ಯಮಂತ್ರಿ ಹಾಗೂ ಮಾಜಿ ಸಹಕಾರ ಸಚಿವ ಶ್ರೀ ಲಕ್ಷ್ಮಣ ಸವದಿಯಯವರ ಅಧ್ಯಕ್ಷತೆಯಲ್ಲಿ ಸಮೀತಿಯೊಂದನ್ನು ರಾಜ್ಯ ಸರಕಾರ ದಿನಾಂಕ 15-7-2023 ರಂದು ರಚಿಸಿ ಆದೇಶ ಹೊರಡಿಸಿದೆ.

ಈ ಸಮಿತಿಯ ಸದಸ್ಯರಾಗಿ ಸಚಿವ ಮಾಜಿ ಸಹಕಾರ ಸಚಿವ ಹಾಗೂ ಹಾಲಿ ಶಾಸಕ ಶ್ರೀ ಜಿ.ಟಿ.ದೇವೇಗೌಡ, ಮಾಜಿ ಸಚಿವ ಶ್ರೀ ಎಸ್. ಆರ್.ಪಾಟೀಲ್, ಮಾಜಿ ಸಚಿವ ಹಾಗೂ ಹಾಲಿ ಶಾಸಕ ಶ್ರೀ ಶಿವರಾಮ ಹೆಬ್ಬಾರ, ಶಾಸಕ ಶ್ರೀ ಕೆ.ಷಡಕ್ಷರಿ, ವಿಧಾನ ಪರಿಷತ ಸದಸ್ಯ ಶ್ರೀ ರಾಜೇಂದ್ರ ರಾಜಣ್ಣ, ಹಿರಿಯ ಸಹಕಾರಿ ಹಾಗು ಮಾರಾಟ ಮಹಾಮಂಡಳದ ಅಧ್ಯಕ್ಷ ಶ್ರೀ ಎಮ್.ಎನ್, ರಾಜೇಂದ್ರಕುಮಾರ, ಸಹಕಾರಿ ಇಲಾಖೆಯ ನಿವೃತ್ತ ಅಪರನಿಬಂಧಕರಾದ ಶ್ರೀ ಎಚ್.ಎಸ್.ನಾಗರಾಜಯ್ಯ, ಶ್ರೀ ರಮಣರೆಡ್ಡಿ, ಯವರುಗಳಿದ್ದಾರೆ. ಸಹಕಾರಿ ಇಲಾಖೆಯ ಅಪರ ನಿಬಂಧಕರಾದ ಶ್ರೀ ದಿವಾಕರರವರು ಸಮಿತಿಯ ಕಾರ್ಯದರ್ಶಿಯಾಗಿದ್ದಾರೆ.

ಈ ಸಮಿತಿಯು ಸಹಕಾರಿ ಕ್ಷೇತ್ರದ ಅಧ್ಯಯನ ಮಾಡಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವಂತೆ ಸಹಕಾರಿ ಕಾಯ್ದೆಗಳಿಗೆ ಅಗತ್ಯವನಿಸುವ ಅವಶ್ಯಕ ತಿದ್ದುಪಡಿಗಳನ್ನು ಸೂಚಿಸಲು 3 ತಿಂಗಳ ಕಾಲಾವಧಿ ನೀಡಲಾಗಿದೆ. ಪ್ರಥಮ ಸಭೆಯನ್ನು ಇದೇ ತಿಂಗಳ 27 ಜುಲೈ 2023 ರಂದು ರಾಜ್ಯ ಸಹಕಾರ ಮಹಾಮಂಡಳದ ಸಭಾಗಂಣದಲ್ಲಿ ನಡೆಸಲಾಗಿದೆ. ಸಭೆಯ ನಂತರದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು ಕಾನೂನು ಕೋಶ ನಿಬಂಧಕರ ಕಚೇರಿ ಇವರು ದಿನಾಂಕ 28.07.2023ರಂದು ಪತ್ರ ಬರೆದು 1959 ಹಾಗೂ 1997 ರ ಕಾಯ್ದೆಗಳ ಪ್ರಕರಣವಾರು ಹಾಗೂ ನಿಯಮವಾರು ತಮ್ಮ ಅಭಿಪ್ರಾಯಗಳನ್ನು ದಿನಾಂಕ 05.08.2023ರ ಒಳಗಾಗಿ ತಿಳಿಸಲು ಸೂಚಿಸಿದ್ದಾರೆ.

## ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಸಲಹಾ ಸಮಿತಿಗೆ ತಿದ್ದುಪಡಿ ವಿಷಯಗಳನ್ನು ಸೂಚಿಸಲು ಸಮಿತಿ ಸದಸ್ಯರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರು ಅಭಿನಂದಿಸಿದರು.






ರಾಜ್ಯದ ಸಹಕಾರಿ ಕಾಯ್ದೆ ತಿದ್ದುಪಡಿಗಾಗಿ ಸರ್ಕಾರ ರಚಿಸಿರುವ ತಿದ್ದುಪಡಿ ಸಲಹಾ ಸಮಿತಿಗೆ ತಿದ್ದುಪಡಿ ವಿಷಯಗಳನ್ನು ಸಲ್ಲಿಸಲು ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ 26.07.2023 ರಂದು ಆಡಳಿತ ಮಂಡಲಿ ಸಭೆ ನಡೆದು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸೂಚಿಸಬಹುದಾದ ತಿದ್ದುಪಡಿಗಳನ್ನು ಸುಧೀರ್ಘವಾಗಿ ಚರ್ಚಿಸಿ ಮನವಿಯೊಂದನ್ನು ಸಿದ್ಧಪಡಿಸಿ ತಿದ್ದುಪಡಿ ಸಲಹಾ ಸಮಿತಿ ಸಭೆಗೆ ದಿನಾಂಕ 27.07.2023ರಂದು ಮನವಿಯನ್ನು ಸಲ್ಲಿಸಲಾಯಿತು.

## ಉನ್ನತ ಮಟ್ಟದ ಸಭೆ

ರಾಜ್ಯ ಸರ್ಕಾರ ನಡೆಸುತ್ತಿರುವ ಈ ಸಲಹಾ ಸಮಿತಿ ಸಭೆಗೆ ತಿದ್ದುಪಡಿ ವಿಷಯಗಳ ಬಗ್ಗೆ ಸೂಚಿಸಲು ಉನ್ನತ ಮಟ್ಟದ ಸಭೆಯೊಂದನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಈ ಸಭೆಯಲ್ಲಿ ಮಾಜಿ ಅಧ್ಯಕ್ಷರುಗಳಾದ, ಶ್ರೀ ಮನೋಹರ ಮಸ್ಕಿ, ಶ್ರೀ ವಿಶ್ವನಾಥ ಚ ಹಿರೇಮಠ, ಶ್ರೀ ಎಸ್ ಆರ್ ಸತೀಶ್ಚಂದ್ರ, ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಹೆಚ್ ವಿ ರಾಜೀವ, ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ, ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರಾದ ಶ್ರೀ ಬಿ ಎಸ್ ಗುಂಡೂರಾವ್, ಸೌಹಾರ್ದ ಸಹಕಾರಿ ಕಾಯ್ದೆಯ ರಚನೆಯ ರುವಾರಿಯಾದ ಶ್ರೀ ಸಿ ಎನ್ ಪರಶಿವಮೂರ್ತಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಭಾಗವಹಿಸಿ ಸುಧೀರ್ಘ ಚರ್ಚೆ ನಡೆಸಿದರು.



**ಶ್ರೀ ತಿಮ್ಮಯ್ಯ, ಶಾಸಕರು, ಚಿಕ್ಕಮಗಳೂರು ಕ್ಷೇತ್ರ ಹಾಗೂ ನಿರ್ದೇಶಕರು, ಸಮಾನ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಆಯ್ಕೆಯಾದ ಇವರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.**



## ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಂ ಗೋಪಿಕೃಷ್ಣರಾವ್ ಭೇಟಿ

**ಬೆಂಗಳೂರು :** ದಿನಾಂಕ 24.07.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾಜಿ ನಿರ್ದೇಶಕರಾದ ಶ್ರೀ ಎಂ ಗೋಪಿಕೃಷ್ಣರಾವ್ ಇವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಆತ್ಮೀಯವಾಗಿ ಬರಮಾಡಿಕೊಂಡು ಸನ್ಮಾನಿಸಲಾಯಿತು.

## ಇ-ಸ್ಟಾಂಪಿಂಗ್ ತರಬೇತಿ ಕಾರ್ಯಕ್ರಮಗಳು



**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ಯಿಂದ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ ದಿನಾಂಕ:20.07.2023 ರ ಗುರುವಾರ ರಂದು ಬೆಳಿಗ್ಗೆ 11.00 ಗಂಟೆ ಗೆ, ರೋಟರಿ ಚಿಲ್ಡನ್ಸ್ ಲೈಬ್ರರಿ ಅಸೋಷಿಯೇಷನ್(ರಿ), ರೋಟರಿ ಸೆಂಟರ್(ಕ್ಲಬ್), ಜೆ.ಎಲ್.ಬಿ ರೋಡ್, ಮೈಸೂರ ಇಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ರವರು ನೆರವೇರಿಸಿದರು. ಉದ್ಘಾಟಕರಾಗಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ನವೀನ ಎಚ್.ಎನ್ ರವರು ಉಪಸ್ಥಿತರಿದ್ದರು. ಕೇಂದ್ರ ಕಛೇರಿಯ ಈ ಸ್ಟಾಂಪಿಂಗ್ ವಿಭಾಗದ ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ರಾವ್ ಶಿಂಧೆ ರವರು ಹಾಗೂ ಹಿರಿಯ ಸಹಾಯಕರಾದ ಶ್ರೀ ವಿನೋದ ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಮತ್ತು ವಂದನಾರ್ಪಣೆಯನ್ನು ಶ್ರೀ ಚಂದ್ರಶೇಖರ್ ಎಂ ರವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ 31 ಸೌಹಾರ್ದ ಸಹಕಾರಿಗಳಿಂದ 42 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಮಾನ್ಯ ಸಹಕಾರ ಸಚಿವರಾದ ಕೆ. ಎನ್ ರಾಜಣ್ಣ ಇವರಿಗೆ ಸನ್ಮಾನ



ದಿನಾಂಕ 30.07.2023 ರಂದು ಶ್ರೀ ಕೆ.ಎನ್.ರಾಜಣ್ಣ, ಮಾನ್ಯ ಸಹಕಾರ, ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ಇವರು ಬೆಳಗಾವಿ ಪ್ರಾಂತೀಯ ಮಟ್ಟದ ಇಲಾಖಾವಾರು ಪ್ರಗತಿ ಪರಿಶೀಲನೆ ಸಭೆಯ ನಿಮಿತ್ಯ ಬೆಳಗಾವಿಗೆ ಆಗಮಿಸಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಸಿಬ್ಬಂದಿವರ್ಗದವರು ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

## ಮಾಜಿ ಉಪಮುಖ್ಯಮಂತ್ರಿಯವರಾದ ಶ್ರೀ ಲಕ್ಷ್ಮಣ ಸವದಿ ಇವರ ಭೇಟಿ



**ಬೆಳಗಾವಿ :** ದಿನಾಂಕ 24 ಜುಲೈ 2023ರ ಸೋಮವಾರದಂದು ಅಥಣಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು, ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರರವರು, ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು, ನಿರ್ದೇಶಕರಾದ ಶ್ರೀ ಶ್ರೀಧರರವರು, ಮತ್ತು ಶ್ರೀ ಹೆಚ್ ಜಿ ಹನುಮಂತಶೆಟ್ಟಿ ರವರು ಶಾಸಕರು ಮಾಜಿ ಉಪಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಲಕ್ಷ್ಮಣ ಸವದಿರವರನ್ನು ಭೇಟಿ ಮಾಡಿ ಸಹಕಾರ ಕ್ಷೇತ್ರದ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಾನ್ಯರನ್ನು ಸನ್ಮಾನಿಸಲಾಯಿತು.

## ಉಡುಪಿ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇದರ ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯನ್ನು ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ನಂಜನಗೌಡ ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ. ಶ್ರೀಮತಿ ಭಾರತಿ ಜಿ ಭಟ್. ಸಂಯುಕ್ತ ಸಹಕಾರಿ ಮಾಜಿ ನಿರ್ದೇಶಕರಾದ ಶ್ರೀ ಭಾಸ್ಕರ್ ಕಾಮತ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಭಾಗವಹಿಸಿದ್ದರು.



## ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕೆ.ಎಸ್ ನವೀನ್ ಇವರ ಭೇಟಿ.

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎಸ್ ನವೀನ್ ಇವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ವ್ಯವಸ್ಥಾಪಕರಾದ ಶ್ರೀ ವಿ.ಜೆ ಕಾರಕೂನ್ ಇವರು ಉಪಸ್ಥಿತರಿದ್ದರು.

# ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು



**ದಾವಣಗೆರೆ** : ದಿನಾಂಕ 18.07.2023ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಪ್ರಿನ್ಸ್ ಕಾನ್ಫರೆನ್ಸ್ ಹಾಲ್, ಚೇತನ ಹೋಟೆಲ್, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ಇವರು ವಹಿಸಿದ್ದರು. ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ರಘುರಾಮರೆಡ್ಡಿ ಇವರು ಉಪಸ್ಥಿತರಿದ್ದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಎಸ್. ಶ್ರೀಧರ್ ಇವರು ಸ್ವಾಗತ ನಡೆಸಿಕೊಟ್ಟರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ನಿರೂಪಿಸಿ ವಂದಿಸಿದರು. 126 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಶಿವಮೊಗ್ಗ** : ದಿನಾಂಕ 19.07.2023ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಮಥುರಾ ಪ್ಯಾರಡೈಸ್, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶಿವಮೊಗ್ಗ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸುರೇಶ್ ರವರು ಉಪಸ್ಥಿತರಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಎಸ್. ರವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜು ಜಿ.ಹೆಚ್ ಇವರು ಭಾಗವಹಿಸಿದ್ದರು. 95 ಸಹಕಾರಿಗಳಿಂದ 212 ಜನರು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 20.07.2023ರಂದು ಬೆಂಗಳೂರು ನಗರ(1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಉದಯ ಸೌಹಾರ್ದ ಸಹಕಾರಿ ನಿ, ಹನುಮಂತ ನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜೀ ಪಾಟೀಲ ಇವರು ನೆರವೇರಿಸಿದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಎಸ್. ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಹಾಗೂ ಶ್ರೀ ವಿಕ್ರಾಂತ್ ಪಾಟೀಲ ಇವರು ಉಪಸ್ಥಿತರಿದ್ದರು. 68 ಸಹಕಾರಿಗಳಿಂದ 104 ಪ್ರತಿನಿಧಿಗಳು ಭಾಗವಹಿಸಿದ್ದರು.




**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ದಿನಾಂಕ 21–7–2023 ರ ಶುಕ್ರವಾರದಂದು ದಕ್ಷಿಣಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿ ಮಾತನಾಡಿದರು. ಈ ಸಮಯದಲ್ಲಿ ಅತಿಥಿಗಳಾಗಿ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಮತ್ತು ದ.ಕ ಜಿಲ್ಲೆಯ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ ರವರು ಭಾಗವಹಿಸಿದ್ದರು.

ಈ ಸಂಪರ್ಕ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ಸಹಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು. ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್, ಸ್ವಾಗತ ಮಾಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ್ ನುಡಿದರು ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ನಿರ್ವಹಿಸಿದರು. ಮಧ್ಯಾಹ್ನದ ಅವಧಿಯಲ್ಲಿ ಸಾಮಾನ್ಯ ಸಭೆ ನಡೆಸುವ ಕಾರ್ಯವಿಧಾನದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀದರ್ ಸೋಮಯಾಜಿ ರವರು ಮಾಹಿತಿ ನೀಡಿದರು. ದಕ್ಷಿಣಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿ 82 ಸಹಕಾರಿಗಳಿಂದ 106 ಜನರು ಭಾಗವಹಿಸಿದ್ದರು.



**ಉಡುಪಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ದಿನಾಂಕ 22–7–2023 ರ ಶನಿವಾರದಂದು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿ ಮಾತನಾಡಿದರು. ಈ ಸಮಯದಲ್ಲಿ ಅತಿಥಿಗಳಾಗಿ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ಮತ್ತು ಉಡುಪಿ ಜಿಲ್ಲೆಯ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಭಾಗವಹಿಸಿದ್ದರು.

ಈ ಸಂಪರ್ಕ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿ ಸಹಕಾ–ರಿಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ್, ಸ್ವಾಗತ ಮಾಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ನುಡಿದರು ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ನಿರ್ವಹಿಸಿದರು. ಮಧ್ಯಾಹ್ನದ ಅವಧಿಯಲ್ಲಿ ಸಾಮಾನ್ಯ ಸಭೆ ನಡೆಸುವ ಕಾರ್ಯವಿಧಾನದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀದರ್ ಸೋಮಯಾಜಿ ರವರು ಮಾಹಿತಿ ನೀಡಿದರು. ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು,ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿ 112 ಸಹಕಾರಿಗಳಿಂದ 118 ಜನರು ಭಾಗವಹಿಸಿದ್ದರು.



**ರಾಯಚೂರು :** ದಿನಾಂಕ 25.07.2023 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ಸಿಂಧನೂರು, ಮಾನವಿ, ಮಸ್ಕಿ ಹಾಗೂ ಲಿಂಗಸೂಗುರು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಗೋಸ್ವಾಮಿ ಕಲ್ಯಾಣ ಮಂಟಪ, ಗಂಗಾವತಿ ರಸ್ತೆ, ಸಿಂಧನೂರುನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ವಹಿಸಿದ್ದರು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ಮತ್ತು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು. ಕಾರ್ಯಕ್ರಮಕ್ಕೆ

ಮುಖ್ಯ ಅತಿಥಿಗಳಾಗಿ ಶ್ರೀ ಬಸಣ್ಣ ರಾಠೋಡ, ಮಾನ್ಯ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಸಿಂಧನೂರು, ಶ್ರೀ ಬಿ ರಾಜಶೇಖರ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆ, ಸ್ವಾಗತ, ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜರವರು, ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನೆರವೇರಿಸಿದರು.

ತರಬೇತಿಯ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಸಣ್ಣ ರಾಠೋಡ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಇವರು ಲೆಕ್ಕಪರಿಶೋಧನಾ ನೂತನ ಮಾದರಿಯ ಕುರಿತು, ಶ್ರೀ ಮಹೇಶ ಮಾಶಾಳ ಕಾರ್ಪೋರೆಟ್ ಟ್ರೇನರ್ ಇವರು ಸಹಕಾರ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿ ಸದಸ್ಯರ ಹಾಗೂ ಸಿಬ್ಬಂದಿಗಳ ಪಾತ್ರ ಮತ್ತು ವೃತ್ತಿ ಜೀವನ ಹಾಗೂ ವೈಯಕ್ತಿಕ ನಿರ್ವಹಣೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. ವಾರ್ಷಿಕ ಸಾಮಾನ್ಯ ಸಭೆಯ ಪೂರ್ವಸಿದ್ದತೆ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯರು ಮಾಹಿತಿ ನೀಡಿದರು. 4 ತಾಲೂಕುಗಳಿಂದ 270 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ರಾಯಚೂರು** : ದಿನಾಂಕ 26.07.2023 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ರಾಯಚೂರು, ಸಿರವಾರ, ದೇವದುರ್ಗ ತಾಲೂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಕೃಷಿ ವಿಶ್ವವಿದ್ಯಾಲಯ ಕೆ.ವಿ.ಕೆ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ವಹಿಸಿದ್ದರು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿ ಯವರು ಮತ್ತು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಬಸವ ಭಾರತ ಸೌಹಾರ್ದ ಸಹಕಾ–ರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೆಂಕಟೇಶ ಜಡಲಾರವರು ನೆರವೇರಿಸಿದರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜರವರು ಮಾಡಿದರು. ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನೆರವೇರಿಸಿದರು

ವಾರ್ಷಿಕ ಸಾಮಾನ್ಯ ಸಭೆಯ ಪೂರ್ವ ಸಿದ್ದತೆ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು. ಶ್ರೀ ಮಹೇಶ ಮಾಶಾಳ ಕಾರ್ಪೋರೆಟ್ ತರಬೇತುದಾರರು, ಇವರು ಸಹಕಾರ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿ ಸದಸ್ಯರ ಹಾಗೂ ಸಿಬ್ಬಂದಿಗಳ ಪಾತ್ರ ಮತ್ತು ವೃತ್ತಿ ಜೀವನ ಹಾಗೂ ವೈಯಕ್ತಿಕ ನಿರ್ವಹಣೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. 3 ತಾಲೂಕುಗಳಿಂದ 120 ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾಸನ** : ದಿನಾಂಕ 02.08.2023 ರಂದು ಬುಧವಾರ, ಬೆಳಿಗ್ಗೆ 10.00 ಗಂಟೆಗೆ, ಹಾಸನ ಜಿಲ್ಲೆ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಜ್ಯೂವೆಲ್ ರಾಕ್, ಬಿ.ಎಂ ರಸ್ತೆ, ಹಾಸನ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಂ. ರೇವಣ್ಣಯ್ಯ, ಅಧ್ಯಕ್ಷರು, ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ ಇವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಶ್ರೀ ಎಂ.ಕೆ ರಮೇಶ್ ರವರು, ಅಧ್ಯಕ್ಷರು, ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಮತ್ತು ಶ್ರೀ ಮಾಧವ ಶೆಣೈ ರವರು, ಅಧ್ಯಕ್ಷರು, ಹಾಸನ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತ್ಯದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ಮಾಡಿದರು. ಇದೇ ಸಂದರ್ಭದಲ್ಲಿ ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಸಾಲ ವಸೂಲಾತಿ ಕ್ರಮಗಳು ಮತ್ತು ದಾವಾ ಪಂಚಾಯಿತಿ ನ್ಯಾಯಾಲಯ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಂ. ಮಹಂತಪ್ಪ ರವರು, ಅಧಿಕಾರಿಗಳು, ಟಾಸ್ಕ್ ಫೋರ್ಸ್ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಹಾಸನ ಜಿಲ್ಲೆಯ 36 ಸಹಕಾರಿಗಳಿಂದ 86 ಜನ ಪ್ರತಿನಿಧಿಗಳು ಮತ್ತು ಇತರೇ 12 ಸೇರಿ ಒಟ್ಟು 98 ಜನರು ಹಾಜರಾಗಿದ್ದರು.



**ಮೈಸೂರು** : ದಿನಾಂಕ 01.08.2023 ರಂದು ಮಂಗಳವಾರ, ಬೆಳಿಗ್ಗೆ 10.00 ಗಂಟೆಗೆ, ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಗ್ರೀನ್ ಹೆರಿಟೇಜ್, ದಿವಾನ್ಸ್ ರಸ್ತೆ ಮೈಸೂರು, ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು, ಕೊಡಗು ಹಾಗೂ ಮಂಡ್ಯ ಜಿಲ್ಲೆ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್. ಆರ್ ನಾರಾಯಣರಾವ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಎಚ್. ವಿ. ರಾಜೀವ್ ರವರು ಮತ್ತು ಶ್ರೀ ಎಂ.ಕೆ.ಸೋಮಯ್ಯ ರವರು ಉಪಸ್ಥಿತ–ರಿದ್ದರು. ಅತಿಥಿಗಳಾಗಿ ಒಕ್ಕೂಟದ ನಿರ್ದೇಶಕರಾದ ಶ್ರೀ ನವೀನ ಹೆಚ್. ಎನ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎ.ಆರ್ ಶ್ರೀನಾಥ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ನೆರವೇರಿಸಿದರು. ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ ಎಂ ರವರು, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ರವರು ನೆರವೇರಿಸಿದರು.

ಎರಡನೆಯ ಅವಧಿಯಲ್ಲಿ ನಿರ್ದೇಶಕರ ಹಕ್ಕು ಮತ್ತು ಕರ್ತವ್ಯಗಳು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀನಾಥ ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು, ಕೊಡಗು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ 76 ಸಹಕಾರಿಗಳಿಂದ 138 ಜನ ಪ್ರತಿನಿಧಿಗಳು ಹಾಜರಾಗಿದ್ದರು.

---



**ದಾವಣಗೆರೆ** ; ದಿನಾಂಕ 27.07.2023ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ನೂತನ ಲೆಕ್ಕಪರಿಶೋಧನಾ ನಮೂನೆ ವಿಷಯದ ಕುರಿತು ತರಬೇತಿಯನ್ನು ಪ್ರಿನ್ಸ್ ಕಾನ್ಫರೆನ್ಸ್ ಹಾಲ್, ಹೋಟೆಲ್ ಚೇತನ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ಆರ್. ಪ್ರಭುದೇವ್ ಇವರು ವಹಿಸಿದ್ದರು. ಉದ್ಘಾಟಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಕೆ. ಮಹೇಶ್ವರಪ್ಪ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು ಇವರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್. ಎಮ್. ನಾಗರಾಜ್ ಹಾಗೂ ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ಇವರು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಕಾರ್ಯಕ್ರಮದ ನಿರೂಪಣೆಯನ್ನು ನಿರ್ವಹಿಸಿದರು. 109 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಚಿಕ್ಕಮಗಳೂರು** : ದಿನಾಂಕ 02.08.2023 ರಂದು ಬುಧವಾರ, ಬೆಳಿಗ್ಗೆ 10.00 ಗಂಟೆಗೆ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಸನ್ ರೈಸ್, ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಮಗಳೂರು ಸಹಕಾರ ಯೂನಿಯನ್ನ ಮಾನ್ಯ ಅಧ್ಯಕ್ಷರಾದ ಶ್ರೀ ಮಹಾಬಲ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ವಿಶ್ವನಾಥ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ಮತ್ತು ಸ್ವಾಗತ ನುಡಿಯನ್ನು ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ನೆರವೇರಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ಶಿವಕುಮಾರ್ ಎ ರವರು, ನಿರೂಪಣೆಯನ್ನು ವಂದನಾರ್ಪಣೆಯನ್ನು ವಾಸವಿ ಸೌಹಾರ್ದ ಮುಖ್ಯಕಾರ್ಯ ನಿರ್ವಾಹಕರು ನೆರವೇರಿಸಿದರು. ಎರಡನೆಯ ಅವಧಿಯಲ್ಲಿ ಲೆಕ್ಕಪರಿಶೋಧನೆ ಪ್ರಚಲಿತ ಬದಲಾವಣೆ ಗಳು ಹಾಗೂ ನೂತನ ನಮೂನೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರವಿ ಕುಮಾರ್ ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ 38 ಸಹಕಾರಿಗಳಿಂದ 85 ಜನ ಪ್ರತಿನಿಧಿಗಳು ಹಾಜರಾಗಿದ್ದರು.

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

| ಕ್ರ. ಸಂ | ಜಿಲ್ಲೆ | ದಿನಾಂಕ | ತರಬೇತಿಯ ಸ್ಥಳ | ಫಲಾನುಭವಿಗಳು | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಸಂಖ್ಯೆ | ಭಾಗವಹಿಸಿದ ಪ್ರತಿನಿಧಿಗಳ ಸಂಖ್ಯೆ |
|---|---|---|---|---|---|---|
| 1 | ಬಾಗಲಕೋಟ | 05 ಜುಲೈ 2023 | ಸ್ವಾಮಿ ವಿವೇಕಾನಂದ ಕಾಲೇಜು, ಬೀಳಗಿ | ಬೀಳಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 29 | 35 |
| 2 | ವಿಜಯಪುರ | 17 ಜುಲೈ 2023 | ಶ್ರೀ ಶಾಂತವೀರ ಪತ್ತಿನ ಸೌಹಾರ್ದ ಸಹಕಾರಿ ನಿ., ಬಬಲೇಶ್ವರ | ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 21 | 24 |
| 3 | ಬೆಳಗಾವಿ | 17 ಜುಲೈ 2023 | ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ ನಿ., ಗೋಕಾಕ | ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಗೋಕಾಕ ನಗರ, ಮಮದಾಪುರ, ಮೆಳವೆಂಕಿ, ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ | 22 | 26 |
| 4 | ಬೆಳಗಾವಿ | 17 ಜುಲೈ 2023 | ನಾಗನೂರ ಅರ್ಬನ ಸೌಹಾರ್ದ ಸಹಕಾರಿ ನಿ., ನಾಗನೂರ | ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಕಲ್ಲೋಳಿ, ನಾಗನೂರ, ಮೂಡಲಗಿ, ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ | 20 | 24 |
| 5 | ಬೆಳಗಾವಿ | 18 ಜುಲೈ 2023 | ಶ್ರೀ ದುರದುಂಡೇಶ್ವರ ಅರ್ಬನ್ ಸೌಹಾರ್ದ ಸಹಕಾರಿ ಸಂಘ ನಿ., ನೀಡಸೊಸಿ | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನೀಡಸೊಸಿ,ಅಮ್ಮಣಗಿ, ಅಮ್ಮನಬಾವಿ, ಕೇಸ್ತಿ, ಬಾಡ ಗ್ರಾಮಗಳಲ್ಲಿನ ಸೌಹಾರ್ದ ಸಹಕಾ–ರಿಗಳಿಗೆ | 16 | 22 |
| 6 | ಉತ್ತರಕನ್ನಡ | 19 ಜುಲೈ 2023 | ಟಿ.ಎಸ್.ಎಸ್. ಸಭಾಭವನ, ಶಿರಸಿ | ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ದಾಂಡೇಲಿ, ಮುಂಡಗೋಡ ಮತ್ತು ಜೊಯಿಡಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 22 | 26 |
| 7 | ಉತ್ತರಕನ್ನಡ | 19 ಜುಲೈ 2023 | ಟಿ.ಎಸ್.ಎಸ್. ಸಭಾಭವನ, ಶಿರಸಿ | ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 24 | 32 |
| 8 | ಬೆಳಗಾವಿ | 19 ಜುಲೈ 2023 | ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ | ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಚಿಕ್ಕೋಡಿ, ಕಬ್ಬೂರ, ಬೆಳಕೂಡ, ನಾಗರ ಮುನ್ನೊಳಿ ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ | 23 | 27 |
| 9 | ಬೆಳಗಾವಿ | 19 ಜುಲೈ 2023 | ಶ್ರೀ ಶ್ರದ್ಧಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., | ಬೆಳಗಾವಿ ಜಿಲ್ಲೆಯ ನಿಪ್ಪಾಣಿ ನಗರದ ಸೌಹಾರ್ದ ಸಹಕಾರಿಗಳಿಗೆ | 14 | 16 |
| 10 | ವಿಜಯಪುರ | 19 ಜುಲೈ 2023 | ಶ್ರೀ ದಾನೇಶ್ವರಿ ಸೌಹಾರ್ದ ಸಹಕಾರಿ ನಿ., ಚಡಚಣ | ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 20 | 24 |

| | | | | | | |
|---|---|---|---|---|---|---|
| 11 | ವಿಜಯಪುರ | 20 ಜುಲೈ 2023 | ಶ್ರೀ ಗುಡ್ಡದ ಬಸವರಾಜೇಂದ್ರ ಸೌಹಾರ್ದ ಸಹಕಾರಿ ನಿ., ಇಚಿಡಿ | ವಿಜಯಪುರ ಜಿಲ್ಲೆಯ ಇಂಡಿ ನಗರದ ಸೌಹಾರ್ದ ಸಹಕಾರಿಗಳಿಗೆ | 21 | 27 |
| 12 | ಬೆಳಗಾವಿ | 20 ಜುಲೈ 2023 | ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ ಸುಲ್ತಾನಪುರ | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸುಲ್ತಾನಪುರ, ಮದಿಹಳ್ಳಿ, ಬೆಣಿವಾಡ, ಇಂಗಳಿ, ಯರನಾಳ, ಹೊಸುರು, ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ | 12 | 22 |
| 13 | ಬೆಳಗಾವಿ | 20 ಜುಲೈ 2023 | ಶ್ರೀ ಹರಿಪ್ರಿಯ ಸೇವಾ ಪತ್ತಿನ ಸೇವಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬಜಾರ್ ಪೇಟ್ ಖಾನಾಪುರ–ಪಟ್ಟಣದಲ್ಲಿ | ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಸಹಕಾರಿಗಳಿಗೆ | 20 | 41 |
| 14 | ಬೆಳಗಾವಿ | 21 ಜುಲೈ 2023 | ಕಿತ್ತೂರ ರಾಣಿ ಚೆನ್ನಮ್ಮ ಅರ್ಬನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ | ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 14 | 21 |
| 15 | ಉತ್ತರಕನ್ನಡ | 21 ಜುಲೈ 2023 | ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ | ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ | 17 | 16 |
| 16 | ಉತ್ತರಕನ್ನಡ | 21 ಜುಲೈ 2023 | ಭಟ್ಕಳ ಸೌಹಾರ್ದ ಸಹಕಾರಿ ಸಂಘ ನಿ., ಭಟ್ಕಳ | ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಸೌಹಾರ್ದ ಸಹಕಾ–ರಿಗಳಿಗೆ | 20 | 22 |
| 17 | ಬೆಳಗಾವಿ | 21 ಜುಲೈ 2023 | ಜಾಗೃತಿ ಅರ್ಬನ ಸೌಹಾರ್ದ ಸಹಕಾರಿ ನಿ., ಹಾರುಗೇರಿ | ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಹಾರುಗೇರಿ, ಗ್ರಾಮದ ಸೌಹಾರ್ದ ಸಹಕಾರಿಗಳಿಗೆ | 9 | 14 |
| 18 | ವಿಜಯಪುರ | 21 ಜುಲೈ 2023 | ಶ್ರೀ ಗುಡ್ಡದ ಬಸವರಾಜೇಂದ್ರ ಸೌಹಾರ್ದ ಸಹಕಾರಿ ನಿ., ಇಂಡಿ | ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಗ್ರಾಮೀಣದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ | 17 | 23 |
| 19 | ವಿಜಯಪುರ | 24 ಜುಲೈ 2023 | ಮಾರ್ಗದರ್ಶಿ ಕರಿಯರ್ ಅಕಾಡೆಮಿ, ವಿಜಯಪುರ | ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ (ಭಾಗ–01) | 34 | 38 |
| 20 | ಬೆಳಗಾವಿ | 25 ಜುಲೈ 2023 | ಕಿತ್ತೂರ ಕರ್ನಾಟಕ್ ಸೌಹಾರ್ದ ಸಹಕಾರಿ ನಿ., ಕಿತ್ತೂರ | ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗ | 14 | 17 |
| 21 | ವಿಜಯಪುರ | 25 ಜುಲೈ 2023 | ಮಾರ್ಗದರ್ಶಿ ಕರಿಯರ್ ಅಕಾಡೆಮಿ, ವಿಜಯಪುರ | ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ (ಭಾಗ–02) | 30 | 35 |
| 22 | ಉತ್ತರಕನ್ನಡ | 26 ಜುಲೈ 2023 | ಯೂನಿಯನ್ ಕಛೇರಿ, ಕುಮಟಾ | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ | 22 | 27 |
| 23 | ವಿಜಯಪುರ | 26 ಜುಲೈ 2023 | ಮಾರ್ಗದರ್ಶಿ ಕರಿಯರ್ ಅಕಾಡೆಮಿ, ವಿಜಯಪುರ | ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ (ಭಾಗ–03) | 30 | 34 |
| 24 | ಬೆಳಗಾವಿ | 26 ಜುಲೈ 2023 | ಪ್ರಾಂತೀಯ ಕಛೇರಿಯ ತರಬೇತಿ ಸಭಾಭವನ, ಬೆಳಗಾವಿ | ಬೆಳಗಾವಿ ಹಾಗೂ ಖಾನಾಪುರ ತಾಲ್ಲೂಕಿನ ಸೌಹಾರ್ದ ಸಹಕಾ–ರಿಗಳಿಗೆ | 38 | 58 |

| | | | | | | |
|---|---|---|---|---|---|---|
| 25 | ಬೆಳಗಾವಿ | 27 ಜುಲೈ 2023 | ಶ್ರೀ ದುರ್ಗಾ ಮಾತಾ ಸೌಹಾರ್ದ ಸಹಕಾರಿ ನಿ ಸಂಕೇಶ್ವರ | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಪಟ್ಟಣದ ಸೌಹಾರ್ದ ಸಹಕಾರಿಗಳಿಗೆ | 38 | 45 |
| 26 | ಉತ್ತರಕನ್ನಡ | 28 ಜುಲೈ 2023 | ಹೋಟೆಲ್ ಅಂಕೋಲಾ ಇಚಿಟರ್ ನ್ಯಾಷನಲ್, ಅಂಕೋಲಾ | ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 18 | 21 |
| 27 | ಉತ್ತರಕನ್ನಡ | 28 ಜುಲೈ 2023 | ಹೋಟೆಲ್ ಅಂಕೋಲಾ ಇಚಿಟರ್ ನ್ಯಾಷನಲ್, ಅಂಕೋಲಾ | ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ | 19 | 19 |
| 28 | ಚಿಕ್ಕಬಳ್ಳಾಪುರ | 12 ಜುಲೈ 2023 | ಶ್ರೀ ವಿಜಯ ವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ., | ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ | 10 | 10 |
| 29 | ತುಮಕೂರು | 14 ಜುಲೈ 2023 | ಶಿರಾ ವಾಸವಿ ಸೌಹಾರ್ದ ಸಹಕಾರಿ ಸಂಘ ನಿ., ಶಿರಾ, | ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಸೌಹಾರ್ದ ಸಹಕಾ–ರಿಗಳಿಗೆ | 8 | 11 |
| 30 | ತುಮಕೂರು | 17 ಜುಲೈ 2023 | ಉದಯ ರವಿ ಸೌಹಾರ್ದ ಸಹಕಾರಿ ಸಂಘ ನಿ., ತಿಪಟೂರು | ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಸೌಹಾರ್ದ ಸಹಕಾ–ರಿಗಳಿಗೆ | 12 | 14 |

## ಶ್ರೀ ಸುರೇಶ ಗೌಡ, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಬೆಳಗಾವಿ ಪಿಠಾಧಿಕಾರಿಗಳಾಗಿ ಅಧಿಕಾರ ಸ್ವೀಕಾರ



ಶ್ರೀ ಸುರೇಶ ಗೌಡ, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಬೆಳಗಾವಿ ಇವರು ಸೌಹಾರ್ದ ಸಂಯುಕ್ತ ಸಹಕಾರಿಯ ದಾವಾ ಪಂಚಾಯತ್ ನ್ಯಾಯಾಲಯ ಬೆಳಗಾವಿ ವಿಭಾಗದ ವಿಶೇಷ ಪಿಠಾಧಿಕಾರಿಗಳಾಗಿ (ಪ್ರ) ಅಧಿಕಾರ ವಹಿಸಿಕೊಂಡಿರುತ್ತಾರೆ. ಸದರಿಯವರಿಗೆ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು.



**ಹಾಸನ** ; ದಿನಾಂಕ 21.07.2023ರಂದು ನಡೆದ ಹಾಸನ & ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ "ಇ–ಸ್ಟಾಂಪಿಂಗ್ ಕೇಂದ್ರ ಸಿಬ್ಬಂದಿಗಳ" ತರಬೇತಿಯ ಉದ್ಘಾಟನೆಯನ್ನು ಶ್ರೀ ಅಕ್ಷಯ್, ಅಧಿಕಾರಿಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ., ಹಾಸನ ಇವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿ ಶ್ರೀ. ಮೋಹನ್ ರವರು, ಅಧಿಕಾರಿಗಳು, ಸಿ.ಎಂ.ಎಸ್ಎಸ್.ಎಸ್, ಶ್ರೀ ರಾಜೇಂದ್ರ ರಾವ್ ಶಿಂದೆ ರವರು, ನೋಡಲ್ ಅಧಿಕಾರಿಗಳು, ಇ – ಸ್ಟಾಂಪಿಂಗ್ ಕೇಂದ್ರ, ಬೆಂಗಳೂರು ಶ್ರೀಮತಿ ಸಿಂಧು ರವರು ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು ಮತ್ತು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶ್ರೀ ಅಕ್ಷಯ್ ಇವರನ್ನು ಸನ್ಮಾನಿಸಲಾಯಿತು. ತರಬೇತಿಯಲ್ಲಿ ಶ್ರೀ ರಾಜೇಂದ್ರ ರಾವ್ ಶಿಂದೆ ರವರು, ಶ್ರೀಮತಿ. ಸಿಂಧು ರವರು ಹಾಗೂ ಶ್ರೀ ವಿನೋದ್ ರವರು ಸಂಪನ್ಮೂಲ ವ್ಯಕ್ತಿಗಳಾಗಿ ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ 18 ಸೌಹಾರ್ದ ಸಹಕಾರಿಗಳ 25 ಪ್ರತಿನಿಧಿಗಳು ಹಾಜರಿದ್ದರು.

# ನಮ್ಮ ಹೆಮ್ಮೆಯ ನಿರ್ದೇಶಕರು



ಶ್ರೀ ಎ.ಆರ್. ಪ್ರಸನ್ನ ಕುಮಾರ್, ಮೂಲತಹ, ಸಿವಿಲ್ ಇಂಜಿನಿಯರ್, ಇವರು ನಮ್ಮ ಸಹಕಾರಿಯಲ್ಲಿ 2005ರಲ್ಲಿ ಸದಸ್ಯರಾಗಿ ನಮ್ಮ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರಿಗೆ ಪಾದಾರ್ಪಣೆ ಮಾಡಿದ್ದಲ್ಲದೆ, ಪ್ರಥಮ ಆಡಳಿತ ಮಂಡಳಿಯಲ್ಲಿ ನಿರ್ದೇಶಕರಾಗಿ, 2012 ರಿಂದ 2020ರವರೆಗೆ ಅಧ್ಯಕ್ಷರಾಗಿ, ನಂತರ ನಿರ್ದೇಶಕ ಪದವಿಯಲ್ಲಿ ಮುಂದುವರೆದಿರುತ್ತಾರೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವಿಭಾಗದ ನಿರ್ದೇಶಕರಾಗಿ 2022ರವರೆಗೆ ನಂತರದಲ್ಲಿ ಪುನಃ 2022ರಿಂದ ಉಪಾಧ್ಯಕ್ಷರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದು ವಿಪ್ರ ಸಹಕಾರಿಗೆ ಭೂಷಣ ಪ್ರಾಯರಾಗಿದ್ದಾರೆಂದು ತಿಳಿಸಲು ಹೆಮ್ಮೆ ಎನಿಸುತ್ತದೆ.

ಇವರು ಶಿವಮೊಗ್ಗ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳನ್ನು ಒಟ್ಟುಗೂಡಿಸಿ 2017ರಲ್ಲಿ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಶಿವಮೊಗ್ಗವನ್ನು ಪ್ರಾರಂಭಮಾಡುವಲ್ಲಿ ಇವರ ಪಾತ್ರ ಪ್ರಮುಖವಾಗಿರುತ್ತದೆ. ಇದರಲ್ಲಿ ಇವರು 2017 ರಿಂದ 2021ರವರೆಗೆ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದು 2021 ರಿಂದ ಇಲ್ಲಿಯವರೆಗೆ ಅಧ್ಯಕ್ಷರಾಗಿ ಒಕ್ಕೂಟದ ಕಾರ್ಯಚಟುವಟಿಕೆಗಳನ್ನು ವಿಸ್ತರಿಸುತ್ತಿದ್ದಾರೆ.

ಶಿವಮೊಗ್ಗ ಜಿಲ್ಲಾ ಸಹ್ಯಾದ್ರಿ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟವು ಶಿವಮೊಗ್ಗ ಜಿಲ್ಲೆಯಲ್ಲಿ ಸೌಹಾರ್ದ ಕಾಯ್ದೆಯಡಿ ನೊಂದಾಯಿತವಾದ ಸುಮಾರು 130 ಸೌಹಾರ್ದ ಸಹಕಾರಿ ಸಂಸ್ಥೆಗಳ ಒಕ್ಕೂಟವಾಗಿದ್ದು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಒಕ್ಕೂಟವು ಶಿವಮೊಗ್ಗ ಜಿಲ್ಲೆ ಹೊಸನಗರ (ತಾ॥) ನಿಟ್ಟೂರಿನ ಸಮೀಪ 5 ಎಕರೆ ಜಾಗ ಖರೀದಿಸಿ, ಕಲ್ಯಾಣಿ ಚೌಕದಲ್ಲಿ ಒಂದು ಅಂತರರಾಷ್ಟ್ರೀಯ ಮಟ್ಟದ ತರಬೇತಿ ಕೇಂದ್ರ ಮತ್ತು ಪ್ರವಾಸಿ ತಂಗುದಾಣ (ರೆಸಾರ್ಟ್) ಸ್ಥಾಪಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ.

ಹಾಸನ ವಲಯ ಅಡಿಕೆ ಬೆಳೆಗಾರರ ಸಹಕಾರಿ ಸಂಘ ನಿ., ಹಾಸನ ಜಿಲ್ಲೆ. ನಿರ್ದೇಶಕರಾಗಿ ಮತ್ತು ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳ ನಿ., ಶಿವಮೊಗ್ಗ ಜಿಲ್ಲೆ. ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.

---



ದಿನಾಂಕ 26-07-2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್ ಪಾಟೀಲ್ ಇವರು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ದ ಮಲೆನಾಡು ಮಳಿಗೆ ಸೂಪರ್ ಬಜಾರ್ ಮತ್ತು ವಿನೋಬನಗರ ಶಾಖೆಗೆ ಬೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎ ನಾರಾಯಣ ಮೂರ್ತಿ , ಮುಖ್ಯಕಾರ್ಯನಿರ್ವಹಣಾಧಿಕಾ–ರಿಗಳಾದ ಶ್ರೀಮತಿ ಮಾಲತಿ ಎಂ.ಪಿ. ನಿರ್ದೇಶಕರಾದ ಶ್ರೀ ಕುಲಕರ್ಣಿ ಸಿ.ಎಂ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ್ ಎ.ಆರ್ ಮತ್ತು ಸಹಕಾರಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

---



**ರಾಯಚೂರು** : ದಿನಾಂಕ 01.08.2023 ರಂದು ಕಮ್ಮವಾರಿ ಪತ್ತಿನ ಸಹಕಾರಿ ಸಂಘ, ಸಿಂಧನೂರು ಸಹಕಾರಿಯ ಚುನಾವಣೆ ಸಹಕಾರಿ ಸಂಘದ ಕಚೇರಿಯಲ್ಲಿ ನಡೆದಿದ್ದು ಅಧ್ಯಕ್ಷರಾಗಿ ಶ್ರೀ ಕೆ ಸುಬ್ಬಾರಾವ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ವೈ.ನರೇಂದ್ರ ನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ದಿನಾಂಕ 24.07.2023 ರಂದು ಕಮ್ಮವಾರಿ ಪತ್ತಿನ ಸಹಕಾರಿ ಸಂಘದ ಸಾಮಾನ್ಯ ಚುನಾವಣೆಯಲ್ಲಿ 11 ಜನ ಸದಸ್ಯರು ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದು ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆದಿದೆ. ಸಭೆಯಲ್ಲಿ ಎಲ್ಲಾ ನೂತನ ನಿರ್ದೇಶಕರು ಹಾಜ–ರಿದ್ದು ಅಧ್ಯಕ್ಷ ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ.

ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಎಲ್ಲಾ ನಿರ್ದೇಶಕರು ಶುಭ ಕೋರಿದ್ದಾರೆ ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ವೈ ನರೇಂದ್ರನಾಥ್ ಸಭೆಯನ್ನುದ್ದೇಶಿಸಿ ಮಾತನಾಡಿ ನಮ್ಮ ಮೇಲೆ ವಿಶ್ವಾಸವಿಟ್ಟು ಮುಂದಿನ ಐದು ವರ್ಷಕ್ಕಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕೆ ಧನ್ಯವಾದಗಳು ಎಂದು ತಿಳಿಸಿದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಹಾಸನ :** ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಇದರ ಕಛೇರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ .ಜಿ ರವರು ಭೇಟಿ ನೀಡಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಪಡೆದು ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಕೆ ರಮೇಶ್ ರವರು, ಸಿಇಓ ಶ್ರೀಮತಿ ಎಸ್. ಪದ್ಮಾವತಿ ರವರು, ಶ್ರೀ ಶಿವಕುಮಾರ್ ಬಿರಾದಾರ ರವರು, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು, ಶ್ರೀ ಎಂ. ಮಹಂತಪ್ಪ ರವರು, ಅಧಿಕಾರಿಗಳು, ಟಾಸ್ಕ್ ಫೋರ್ಸ್ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು, ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಂ–ಯೋಜಕರು ಮತ್ತು ಸಹಕಾರಿಯ ಸಿಬ್ಬಂದಿಗಳು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.



ದಿನಾಂಕ 18.07.2023 ರಂದು ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ದಾವಣಗೆರೆ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ಎಂ.ಆರ್. ಪ್ರಭುದೇವ್, ಶ್ರೀ ರಘುರಾಮರೆಡ್ಡಿ, ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗರಾಜ್, ಪ್ರಾಂತಿಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಎಸ್. ಇವರು ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು.



**ಹಾಸನ :** ಶ್ರೀ ವಿಘ್ನೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಇದರ ಕಛೇರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ .ಜಿ ರವರು ಭೇಟಿ ನೀಡಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಪಡೆದು ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಮಾರಪ್ಪ ರವರು ಸಿಇಓರಾದ ಶ್ರೀ ರವಿ ರವರು, ಶ್ರೀ ಶಿವಕುಮಾರ್ ಬಿರಾದಾರ ರವರು, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು, ಶ್ರೀ ಕೆ.ಎಂ ರಾಜೇಶ್ ಹಾಗೂ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಮತ್ತು ಸಹಕಾ–ರಿಯ ಸಿಬ್ಬಂದಿಗಳು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.



**ಹಾಸನ :** ಶ್ರೀ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹಾಸನ ಇದರ ಕಛೇರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ .ಜಿ ರವರು ಭೇಟಿ ನೀಡಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಪಡೆದು ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಾರ್ಶ್ವನಾಥ ರವರು, ಉಪಾಧ್ಯಕ್ಷರಾದ ಶ್ರೀ ಗುರುಪ್ರಸಾದ ರವರು, ಆಡಳಿತ ಮಂಡಳಿ ನಿರ್ದೇಶಕರು, ಶ್ರೀ ಶಿವಕುಮಾರ್ ಬಿರಾದಾರ ರವರು, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು, ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿ ವತಿಯಿಂದ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.



ಶ್ರೀ ಸಮೃದ್ಧಿ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಇದರ ಕಛೇರಿಗೆ ಹಾಸನ ಶಾಸಕರಾದ ಹೆಚ್.ಪಿ ಸ್ವರೂಪ್ ರವರು ಆಗಮಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಗುರುಪ್ರಸಾದ್ ಕಾಮತ್ ರವರು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಶಾಸಕರ ನ್ನು ಗೌರವಿಸಿ ಸನ್ಮಾನಿಸಿದರು.

## ಕೃಷ್ಣಾ ಗ್ರಾಮೀಣ ರೈತಸಿರಿ ಸೌಹಾರ್ದ ಸಹಕಾರಿಯಿಂದ ಸಹಕಾರಿ ಶಾಲು ಮಾರಾಟಕ್ಕೆ ಲಭ್ಯ.

ಕೃಷ್ಣಾ ಗ್ರಾಮೀಣ ರೈತಸಿರಿ ಸೌಹಾರ್ದ ಸಹಕಾರಿ ವತಿಯಿಂದ ಸಹಕಾರಿ ಶಾಲು ವಿತರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಸಹಕಾರಿ ಶಾಲು ಅವಶ್ಯವಿದ್ದ ಸಹಕಾರಿಗಳು ಬಸವರಾಜ ಮರಡಿ, ಮೊ 9986820387, 8747873644 ಇವರನ್ನು ಸಂಪರ್ಕಿಸಲು ತಿಳಿಸಿದೆ.




ದಿನಾಂಕ 08.07.2023 ರಂದು ಶ್ರೀಮತಿ ಭಾರತಿ .ಜಿ ಭಟ್ ರವರು, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಶ್ರೀ ವಿಘ್ನೇಶ್ವರ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಕಛೇರಿಗೆ ಭೇಟಿ ನೀಡಿ ಸಿಇಓ ರಾದ ಶ್ರೀ ರವಿ ಕುಮಾರ್ ಇವರೊಂದಿಗೆ ಸಹಕಾರಿಯ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಪಡೆದುಕೊಂಡರು. ಈ ಸಂಧರ್ಭದಲ್ಲಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಮತ್ತು ಸಹಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.



ದಿನಾಂಕ 04.07.2023 ರಂದು ಜಿಲ್ಲಾ ಸಂಯೋಜಕರಾದ ಶ್ರೀ ವಿಕ್ರಾಂತ ಪಾಟೀಲ ಇವರು ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ನಾರಾಯಣ ಬಾಬು ಇವರನ್ನು ಭೇಟಿ ಮಾಡಿ ಬೆಂಗಳೂರು ಸೌಹಾರ್ದ ಸಹಕಾರಿ ಸಂಸ್ಥೆಗಳ ಬಗ್ಗೆ ಚರ್ಚಿಸಿದರು. ನಂತರ ಉದಯ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಆಡಳಿತ ಮಂಡಳಿ ಚುನಾವಣೆ ಮತ್ತು ಸೌಹಾರ್ದ ಕಾಯ್ದೆಯ ಕುರಿತು ಮಾಹಿತಿ ನೀಡಿದರು.

## ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ನೌಕರರ ಸಭೆ




ದಿನಾಂಕ 29–6–2023 ರಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತದಿಂದ ನೌಕರರ ಸಭೆ ಏರ್ಪಡಿಸಿದ್ದು ಈ ಸಭೆಯಲ್ಲಿ ನಿವೃತ್ತ ಕೆನರಾ ಬ್ಯಾಂಕ್ ಮ್ಯಾನೇಜರ್ ಆದ ಶ್ರೀ ಸೀತಾರಾಮ್ ಭಟ್ ಇವರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕರಿಗೆ ನೀಡಬಹುದಾದ ಸೇವೆಗಳು ಹಾಗೂ ಸಹಕಾರಿಯ ಬೆಳವಣಿಗೆಗೆ ಸಿಬ್ಬಂದಿಯವರ ಪಾತ್ರ ಇದರ ಬಗ್ಗೆ ಮಾಹಿತಿ ನೀಡಿದರು ಹಾಗೂ ಶ್ರೀ ನಾಗರಾಜ್ ಎ ಆರ್ ನಿವೃತ್ತ ಡೆವಲಪ್ಮೆಂಟ್ ಆಫೀಸರ್ ನ್ಯೂ ಇಂಡಿಯಾ ಅಶ್ಶೂರೆನ್ಸ್ ಕಂಪನಿ ಲಿಮಿಟೆಡ್ ಇವರು ವಿಮೆಯ ಮಹತ್ವ ಮತ್ತು ಅದರಿಂದ ಆಗುವ ಉಪಯೋಗಗಳು ನೀಡಬಹುದಾದ ಸೇವೆ ಮತ್ತು ಸಹಕಾರಿಯ ಬೆಳವಣಿಗೆಯಲ್ಲಿ ವಿಮೆಯ ಪಾತ್ರ ಇದರ ಬಗ್ಗೆ ತಿಳಿಸಿದರು ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಎಸ್ ಎ ನಾರಾಯಣ ಮೂರ್ತಿ ಉಪಾಧ್ಯಕ್ಷರಾದ ಶ್ರೀ ಗೋಪಾಲ ಎಸ್ ಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಮಾಲತಿ ಎಂ ಪಿ ಹಾಗೂ ಸಹಕಾರಿಯ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಸನ್ ರೈಸ್ ಸೌಹಾರ್ದ ಸಹಕಾರಿಯ ಕಛೇರಿ ಉದ್ಘಾಟನೆ



ದಿನಾಂಕ 23–07–2023ರ ಭಾನುವಾರ ದಂದು ಸನ್ ರೈಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕ್ಯಾತಸಂದ್ರ, ತುಮಕೂರು ಇದರ ಕಚೇರಿ ಬದಲಾವಣೆಯ ಕಾರ್ಯಕ್ರಮವನ್ನು ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಮಠಾಧ್ಯಕ್ಷರು, ಶ್ರೀ ಸಿದ್ಧಗಂಗಾ ಕ್ಷೇತ್ರ ಇವರ ದಿವ್ಯಸಾನಿಧ್ಯ ಹಾಗೂ ಪಾದಪೂಜೆ ಮೂಲಕ ನೆರವೇರಿಸಿದರು. ಸಹಕಾರಿ ಕಚೇರಿ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಚಿವರಾದ ಕೆ.ಎನ್ ರಾಜಣ್ಣ ರವರು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಮಾನ್ಯ ತುಮಕೂರು ನಗರ ಶಾಸಕರಾದ ಶ್ರೀ ಜ್ಯೋತಿ ಗಣೇಶ್ ರವರು, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು, ಸಹಕಾರ ಸಂಘಗಳ ಉಪನಿಬಂಧಕರು, ಸಹಾಯಕ ನಿಬಂಧಕರು, ಸದರಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು, ಇತರೆ ಗಣ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಜಿಲ್ಲೆಯ ಪ್ರಮುಖ ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರುಗಳು, ಸನ್ ರೈಸ್ ಸೌಹಾರ್ದ ಸಹಕಾರಿ ಸಂಘ ನಿ., ಇದರ ಉಪಾಧ್ಯಕ್ಷರು, ನಿರ್ದೇಶಕರು & ಮುಖ್ಯಕಾರ್ಯನಿರ್ವಾಹಕರು ಹಾಗೂ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.



ದಿನಾಂಕ: 10–07–2023 ರಂದು ನೂತನವಾಗಿ ಅಧಿಕಾರ ಸ್ವೀಕರಿಸಿದ ತುಮಕೂರು ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಹೆಚ್. ಮೂರ್ತಿ ರವರನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು ಭೇಟಿ ಮಾಡಿ ಹೂಗುಚ್ಛ ನೀಡುವುದರ ಮೂಲಕ ಸ್ವಾಗತಿಸಿದರು. ಹಾಗೂ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.



ದಿನಾಂಕ: 10–07–2023 ರಂದು ನೂತನವಾಗಿ ಅಧಿಕಾರ ಸ್ವೀಕರಿಸಿದ ತುಮಕೂರು ಉಪವಿಭಾಗ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಜಿ.ಎಸ್ ಪಾರ್ಥ ರವರನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು ಭೇಟಿ ಮಾಡಿ ಹೂಗುಚ್ಛ ನೀಡುವುದರ ಮೂಲಕ ಸ್ವಾಗತಿಸಿದರು. ಹಾಗೂ ತುಮಕೂರು ಉಪವಿಭಾಗದ ಸೌಹಾರ್ದ ಸಹಕಾರಿಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.




**ಹೊಸದುರ್ಗ :** ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ. ಹೊಸದುರ್ಗ ಇವರ 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 27.07.2023ರ ಗುರುವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ಗಣೇಶ ಸದನ, ಬಸ್ ನಿಲ್ದಾಣ, ಹೊಸದುರ್ಗದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿ ಯವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು.

ದಿನಾಂಕ 23.07.2023ರಂದು ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜು ಜಿ.ಹೆಚ್ ಇವರು ಶ್ರೀ ಹುಚ್ಚುರಾಯ ಸ್ವಾಮಿ ಸೌಹಾರ್ದ ಸಹಕಾರಿ ಸಂಘ ನಿ, ಶಿಕಾರಿಪುರ, ಶಿವಮೊಗ್ಗ ಇದರ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದರು.

## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಇದರ ಸಾಮಾನ್ಯ ಸಭೆಯು ದಿನಾಂಕ 16–7–2023 ರ ಭಾನುವಾರದಂದು ಎಸ್.ಜಿ ಕನ್ವೆನ್ಷನ್ ಹಾಲ್, ಚಿತ್ರದುರ್ಗ ಇಲ್ಲಿ ಜರುಗಿತು. ಈ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಸದರಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರು, ಸಹಕಾರ ರತ್ನ ಪುರಸ್ಕೃತರಾದ ಶ್ರೀ ಲಕ್ಷ್ಮೀಕಾಂತರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ಯವರು ಹಾಗೂ ಆಡಳಿತ ಮಂಡಳಿ ಸದಸ್ಯರ ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕೆ ಆರ್ ಮಲ್ಲಿಕಾರ್ಜುನ್ ರವರ ಉಪಸ್ಥಿತಿಯಲ್ಲಿ ಸಾಮಾನ್ಯ ಸಭೆಯು ಯಶಸ್ವಿಯಾಗಿ ಜರುಗಿತು.

ಈ ಸಾಮಾನ್ಯ ಸಭೆಯಲ್ಲಿ ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ ಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಗಳಿಗೆ ಪ್ರತಿಭಾ ಪುರಸ್ಕಾರವನ್ನು ವಿತರಿಸಲಾಯಿತು. 25 ಹಿರಿಯ ಸದಸ್ಯರಿಗೆ ಸನ್ಮಾನ ಮಾಡಲಾಯಿತು.

## ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿಯ ಉದ್ಘಾಟನೆ



**ಕಲಬುರಗಿ** : ದಿನಾಂಕ 08.07.2023 ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ಸಂಘ ನಿ., ಜೇವರ್ಗಿ, ಕಲಬುರಗಿ ಸಹಕಾರಿಯ ಉದ್ಘಾಟನೆಯನ್ನು ಶ್ರೀ ಶರಣಬಸಪ್ಪಗೌಡ ದರ್ಶನಾಪುರ ಮಾನ್ಯ ಸಚಿವರು ಸಣ್ಣ ಕೈಗಾರಿಕಾ ಮತ್ತು ಸಾರ್ವಜನಿಕ ಉದ್ದಿಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಯಾದಗಿರಿ ಇವರು ನೇರವೇರಿಸಿದರು.

ಶ್ರೀ ಕೇದಾರಲಿಂಗಯ್ಯ ಹಿರೇಮಠ ಮಾಜಿ ಅಧ್ಯಕ್ಷರು ಡಿಸಿಸಿ ಬ್ಯಾಂಕ ಕಲಬುರಗಿ ಮತ್ತು ಯಾದಗಿರಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ಕೆ ಇವರು ಉಪಸ್ಥಿತರಿದ್ದರು.



## ಟಾಸ್ಕ್ ಫೋರ್ಸ್ ಸಭೆ

ದಿನಾಂಕ 18 ಜುಲೈ 2023ರಂದು ಧಾರವಾಡ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಬಸವ ಬಳಗ ಸೌಹಾರ್ದ ಸಹಕಾರಿ ನಿ., ಧಾರವಾಡ ಇದರ ಆಡಳಿತ ಮಂಡಲಿ ಸದಸ್ಯರ ಸಭೆಯನ್ನು ಜರುಗಿಸಲಾಯಿತು. ಠೇವಣಿದಾರರ ಠೇವಣಿ ಮರುಪಾವತಿಯ ಕುರಿತು 15 ದಿವಸಗಳ ಅವಧಿಯೊಳಗೆ ಮರುಪಾವತಿ ಮಾಡುವಂತೆ ಸೂಚಿಸಲಾಯಿತು.



**ಗೋಕಾಕ** : ದಿನಾಂಕ 09.07.2023 ಭಾನುವಾರ ದಂದು ಶ್ರೀ ವಿಶ್ವಕರ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಗೋಕಾಕ್ ಬೆಳಗಾವಿ ಸಹಕಾರಿಯ ಚುನಾವಣೆ ನಡೆದಿರುತ್ತದೆ. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾಗಿ ಶ್ರೀ ವಿನಾಯಕ ನಾ ಚಿಪ್ಪಲಕಟ್ಟಿ ಮತ್ತು ಉಪಾಧ್ಯಕ್ಷರಾಗಿ ಶ್ರೀ ವಿನೋಧ ಶ್ರೀ ಡೋಂಗರೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಪಾವಗಡ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಮೈಸೂರು ಶಾಖೆಯ ಉದ್ಘಾಟನೆ ಸಮಾರಂಭ ಶ್ರೀ ಸಿ.ಎನ್ ಪರಶಿವಮೂರ್ತಿ ಇವರಿಗೆ ಸನ್ಮಾನ



ಈ ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಶ್ರೀ ಜಿ.ಟಿ ದೇವೇಗೌಡ, ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ಹೆಚ್.ವಿ. ರಾಜೀವ್ ಮಾಜಿ ಅಧ್ಯಕ್ಷರು-ಮೈಸೂರು ನಗರಾಭಿವೃದ್ಧಿ ಪಾಧೀಕಾರ ಹಾಗೂ ಪಾವಗಡ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಶ್ರೀ ನಾರಾಯಣ್ ರಾವ್ ಮೈಸೂರು, ಮಂಡ್ಯ, ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಅಧ್ಯಕ್ಷರು ಮೈಸೂರು ಶಾಖೆ ಬಿ.ಸಿ.ಎಂ ಸದಸ್ಯರು ಹಾಗು ಅನೇಕ ಗಣ್ಯರು ಉಪಸ್ಥಿತರಿದ್ದರು.

ಶ್ರೀಯುತ ಸಿ ಎನ್. ಪರಶಿವಮೂರ್ತಿಯವರು ಸ್ನಾತಕೋತ್ತರ ಪದವಿಯ ಜೊತೆಗೆ ಎಲ್.ಎಲ್.ಬಿ. ಪದವಿಯನ್ನು ಪಡೆದಿದ್ದು, ಉಪನ್ಯಾಸಕರಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವೃತ್ತಿ ಪಾರಂಭಿಸಿ 1970 ರಲ್ಲಿ ಸಹಕಾರ ಇಲಾಖೆಯಲ್ಲಿ ಸಹಾಯಕ ನಿಬಂಧರಾಗಿ ಸರ್ಕಾರದ ಹಾಗೂ ಸಹಕಾರ ಸಂಘಗಳ ಸೇವೆ ಪಾರಂಬಿಸಿದರು. ನಂತರ 1978ರಲ್ಲಿ ಸಹಕಾರ ಸಂಘಗಳ ಉಪನಿಬಧಕರಾಗಿ ನಂತರ 1980ರಲ್ಲಿ ಜಂಟಿ ನಿಬಂಧಕವಾಗಿ, 1983 ರಲ್ಲಿ ಅಪರ ನಿಬಂಧಕರಾಗಿ ಬಡ್ತಿ ಪಡೆದು ಕರ್ನಾಟಕ ಸರಕಾರ ಹಾಲು ಒಕ್ಕೂಟದ ಮುಖ್ಯಪ್ರಧಾನ ವ್ಯವಸ್ಥಾಪಕರಾಗಿ, 1984ರಿಂದ 1987ರ ಅವಧಿಯಲ್ಲಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ (ಕೆ.ಎ.ಟಿ), ಸದಸ್ಯರಾಗಿ, ಮಂಗಳೂರಿನ "ಕ್ಯಾಂಪ್ಕೋದ ವ್ಯವಸ್ಥಾಪಕ ನಿರ್ದೇಶಕರಾಗಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಹೆಚ್ಚುವರಿ ನಿರ್ದೇಶಕರಾಗಿ ಹಾಗೂ ಕೇಂದ್ರ ಕಚೇರಿಯಲ್ಲಿ ಗ್ರಾಹಕ ಮತ್ತು ಮಾರಾಟ ವಿಭಾಗದ 1998ರವರೆಗೆ ಗಣನೀಯ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರು ಮತ್ತು ಮಾರಾಟ ವಿಷಯದ ಬಗ್ಗೆ 50ಕ್ಕೂ ಹೆಚ್ಚು ಲೇಖನಗಳನ್ನು, ಸಂಶೋಧನೆ ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪುಸ್ತಕಗಳನ್ನು, ಗ್ರಾಹಕ ಚಟುವಟಿಕೆಗಳನ್ನು ಕುರಿತಂತೆ ಒಂದು ಪುಸ್ತಕವನ್ನು - ಸಹಕಾರ ಕಾಯಿದೆಗೆ ಸಂಬಂಧಿಸಿದಂತೆ ಒಂದು ಪುಸ್ತಕ, ಸೇರಿದಂತೆ ಹಲವಾರು ಕೃತಿಗಳನ್ನು ಹಾಗೂ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಸಪ್ತಾಹದ ಸಂದರ್ಭದಲ್ಲಿ ಇವರಿಗೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆ 1997ರ ರುವಾರಿಗಳು. 1998ರಲ್ಲಿ 1959ರ ಸಮಗ್ರ ಸಹಕಾರಿ ಕಾಯ್ದೆಯ ತಿದ್ದುಪಡಿಯ ರುವಾರುಗಳು ಇವರು. ನಿವೃತ್ತರಾದ ನಂತರವು ಶ್ರೀಯುತರು ಸೌಹಾರ್ದ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ನಿರಂತರವಾಗಿ ಮಾರ್ಗದರ್ಶನ ನೀಡಿದ್ದಾರೆ.

ಶ್ರೀ ಸಿ. ಎನ್. ಪರಶಿವಮೂರ್ತಿರವರ ಸನ್ಮಾನದ ಉತ್ತರವಾಗಿ ಮಾತನಾಡಿ ಸಹಕಾರಿ ಕ್ಷೇತ್ರ ಅತ್ಯಂತ ವಿಸ್ತೃತವಾದ ಕ್ಷೇತ್ರ ಜನಸಾಮಾನ್ಯರಿಗೆ ಹೆಚ್ಚಿನ ಸೇವೆಯನ್ನು ಒದಗಿಸುವ ಅವಕಾಶವಿದೆ. ಅಧಿಕಾರಿಯಾದವರು ಪ್ರಾಮಾಣಿಕವಾಗಿ ಬದ್ಧತೆಯಿಂದ ಕಾರ್ಯನಿರ್ವಹಿದರೆ ಎಲ್ಲರೂ ಗೌರವಿಸುತ್ತಾರೆ ಆದರಿಸುತ್ತಾರೆ. ದಿ ಪಾವಗಡ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಮೈಸೂರು ಶಾಖೆ ಪ್ರಾರಂಭದ ಈ ಸಂದರ್ಭದಲ್ಲಿ ನನ್ನ ಸಹಕಾರಿ ಕ್ಷೇತ್ರದ ಸೇವೆಯನ್ನು ಗುರುತಿಸಿ ಗೌರವಿಸಿ ಸನ್ಮಾನಸಿರುವುದಕ್ಕೆ ಅಭಿನಂದನೆಗಳನ್ನು ತಿಳಿಸಿದರು.



## ವಾರ್ಷಿಕ ಸಾಮಾನ್ಯ ಸಭೆ

ಶ್ರೀ ವಿಠ್ಠಲ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಇದರ 19ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 16-07-2023ರ ಭಾನುವಾರ ದಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಎನ್ ಸುರೇಶ್ ರವರ ಘನ ಅಧ್ಯಕ್ಷತೆಯಲ್ಲಿ ಸೇಕ್ರೆಡ್ ಹಾರ್ಟ್ ಸಮುದಾಯ ಭವನ, ತುಮಕೂರು ಇಲ್ಲಿ ಜರುಗಿತು.

## ಸಹಕಾರಿಯ ಆರ್ಥಿಕ ಅಂಕಿ ಅಂಶಗಳು

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ

| Particulars | Data As on 31.03.2023 |
|---|---|
| Interest Income as a percentahe to Working Funds | 9.30% |
| Non-Interest Income as a Percentage to Working Funds | 0.64% |
| Cost of Funds | 6.06% |
| Net Interest Margin | 5.78% |
| Operating Profit as a percentage to working Fund | 1.64% |
| Return on Assets | 11.35% |
| Gross NPA | 5.67% |
| Net NPA | 1.76% |
| BDDR Provision Coverage Ratio | 68.88% |
| CRAR (Capital to Risk Weight Asset Ratio) | 9.41% |
| Priority Sector Advances | 91.20% |
| Total Exposure to Real Estate Sector including Housing | 23.90 Crores |
| Working Capital | 175.49 Crores |
| Business Per Employee | 10.91 Crores |
| Profit Per Employee | 0.05 Crores |
| Payment to Deposit Insurance Premium (DICGC) | 17.79 Lakhs |
| Investments in Govt Securities | 33.64 Crores |
| Penlaty Imposed by RBI | Nil |
| Restricted Accounts | Nil |
| Adavaces against shares and Debentures | Nil |

## ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸೌಹಾರ್ದ ಸಹಕಾರಿ ಸಂಘ ಸ್ಥಳಾಂತರ ಕಛೇರಿ ಉದ್ಘಾಟನೆ



ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸೌಹಾರ್ದ ಸಹಕಾರಿ ಸಂಘ ನಿ ಮಂಗಳೂರು ಅನ್ನು ರಾಜ್ಯ ಮಟ್ಟಕ್ಕೆ ವಿಸ್ತರಿಸಲು ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಶ್ರೀ ರಮೇಶ್ ಸಿ ತಿಳಿಸಿದರು.

ದೀಪ ಪ್ರಜ್ವಲನೆ ಮಾಡಿ ಮಾತನಾಡಿದ ಮಂಗಳೂರು ಮಹಾನಗರ ಪಾಲಿಕೆ ಮೇಯರ್ ಶ್ರೀ ಜಯಾನಂದ ಅಂಚನ್ ಅವರು, ಅತ್ಯುತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಘವು ಇಡೀ ಊರಿನ ಜನರ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ನಿರ್ದೇಶಕರಾದ ಶ್ರೀಮತಿ ಭಾರತಿ ಭಟ್ ಅವರು ಮಾತನಾಡಿ, ಸಹಕಾರಿ ತತ್ವದ ಚೆಂದದ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿ ಸಾಕಾರಗೊಳಿಸುತ್ತಿರುವ ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸೌಹಾರ್ದ ಸಹಕಾರಿ ಸಂಘವು ರಾಜ್ಯಕ್ಕೆ ಮಾದರಿಯಾಗಲಿ ಎಂದು ಶುಭ ಕೋರಿದರು.

ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ರಾಜೇಶ್ ಎಂ.ಬಿ ಸಹಕಾರಿಯ ಸಂಕ್ಷಿಪ್ತ ಪರಿಚಯ ನೀಡಿದರೆ ಉಪಾಧ್ಯಕ್ಷ ಸದಾಶಿವ ಬಂಗೇರ ಸ್ವಾಗತಿಸಿದರು. ರವಿ ಪ್ರಸಾದ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರೆ, ನಿರ್ದೇಶಕರಾದ ರವಿ ಸುವರ್ಣ ವಂದಿಸಿದರು.

---

ದಿನಾಂಕ 08.06.2023ರಂದು ಶ್ರೀಮತಿ ಭಾರತಿ .ಜಿ ಭಟ್ ರವರು, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಶ್ರೀ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹಾಸನ ಇದರ ಉದ್ಘಾಟನೆ ಕಾರ್ಯಕ್ರಮ ನೆರವೇರಿಸಿದರು. ಇದೇ ಸಂದರ್ಭದಲ್ಲಿ ವೇದಿಕೆಯ ಮೇಲೆ ಶ್ರೀ ಎಸ್. ಶಂಕರ್ ರವರು, ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು, ಹಾಸನ ಜಿಲ್ಲೆ ಇವರು, ಶ್ರೀ ಹೆಚ್.ಡಿ ಪಾರ್ಶ್ವನಾಥ ರವರು ಸಹಕಾರಿ ಅಧ್ಯಕ್ಷರು, ಶ್ರೀ ಜಿ. ಕಾಮತ್ ರವರು ಸಹಕಾರಿ ಉಪಾಧ್ಯಕ್ಷರು, ಶ್ರೀ ಆರ್.ಟಿ ದ್ಯಾವೇಗೌಡರು, ಕಾರ್ಯದರ್ಶಿಗಳು, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಸಮಿತಿ, ಹಾಸನ, ಶ್ರೀ ಸಿ.ಎಂ ತಿಮ್ಮಪ್ಪಗೌಡ, ಅಧ್ಯಕ್ಷರು, ಜಿಲ್ಲಾ ಖಾದಿ ಗ್ರಾಮೋದ್ಯೋಗ, ಹಾಸನ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ನೂತನ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

# ಕರ್ನಾಟಕ ಸೌಹಾರ್ದ ಕಾಯಿದೆಯಡಿ ಸಹಕಾರಿಗಳ ಶಾಸನಬದ್ಧ ವಿಚಾರಣೆ - ಒಂದು ವಿಮರ್ಷೆ



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997 ಒಂದು ಉದಾರೀಕೃತ ಕಾಯಿದೆ. ಇದರ ಮುಖ್ಯ ಉದ್ದೇಶ

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ ಜವಾಬ್ದಾರಿಯುತ, ಸ್ಪರ್ದಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮ_____________"

ಈ ಮೇಲ್ಕಂಡ ಉದ್ದೇಶದಿಂದ ಸ್ಥಾಪನೆಯಾದ/ ನೋಂದಣಿಯಾದ ಸಹಕಾರಿಗಳು ಜವಾಬ್ದಾರಿಯುತ ಆಡಳಿತ ನಡೆಸಿದಾಗ ಮಾತ್ರ ಅದನ್ನು ಸ್ವಾಯತ್ತ, ಸ್ವಯಂನಿಯಂತ್ರಿತ ಸಂಸ್ಥೆ ಎನ್ನಬಹುದು. ಆದರೆ ಈ ಸಂಸ್ಥೆಗಳ ಆರೋಗ್ಯವಾಗಿರಬೇಕಾದರೆ, ಸಮಾಜದ ಎಲ್ಲಾ ಅಂಗಗಳೂ ಆರೋಗ್ಯಯುತವಾಗಿರಬೇಕು. ಇತ್ತೀಚಿನ ದಿನಗಳಲ್ಲಿ ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳನ್ನು ಮಾದರಿಯಾಗಿ ತೆಗೆದು ಕೊಂಡಾಗ, ಅವುಗಳಲ್ಲಿನ ನ್ಯೂನ್ಯತೆಗಳನ್ನು ಗಮನದಲ್ಲಿ ತೆಗೆದುಕೊಂಡಾಗ ಸಮಾಜದ ಮೇಲೆ ಆಗುತ್ತಿರುವ ಪರಿಣಾಮಗಳ ಆಧಾರದಲ್ಲಿಯೇ ಸಹಕಾರ ಸಂಸ್ಥೆಗಳು ತಮ್ಮ ಕಾರ್ಯ ನಿರ್ವಹಣೆಗೆ ಗಮನವಹಿಸುತ್ತವೆ.

ಸರ್ಕಾರಿ, ಅರೆ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಮಡುವ ಆರ್ಥಿಕ ಅವ್ಯವಹಾರಗಳನ್ನು ಸಹಕಾರಿಗಳು ಗಮನಿಸುತ್ತಿವೆ ಮತ್ತು ಅನುಕರಣೆ ಮಾಡುತ್ತಿವೆ. ಅಂದರೆ ಬೇರೆ ಸಂಸ್ಥೆಗಳಲ್ಲಿ ನಡೆಯುವ, ಉದಾಹರಣೆಗೆ, ಚುನಾವಣೆಗಳಲ್ಲಿ ಆಗುವ ಅವ್ಯವಹಾರ, ಹಣ ದುರುಪಯೋಗ ಮಾಡುತ್ತಿರುವ ಮತ್ತು ಆಡಳಿತ ದುರ್ನಡತೆಗಳನ್ನು ಗಮನದಲ್ಲಿ ಇಟ್ಟುಕೊಂಡೇ ಸಹಕಾರಿಗಳನ್ನು ತನ್ನ ಕಾರ್ಯ ನಿರ್ವಹಿಸಲು ಅನುಕರಣೆಮಾಡುತ್ತಿವೆ. ಅಂತಹ ವಾತಾವರಣದಲ್ಲಿ ಸೌಹಾರ್ದ ಸಹಕಾರಿಗಳು ಕೆಲಸ ನಿರ್ವಹಿಸುವಾಗ, ತಪ್ಪುಗಳು ಆದಾಗ, ನ್ಯೂನತೆ ಮಾಡಿದಾಗ, ಹಣಕಾಸು ದಿರ್ವನಿಯೋಗವಾದಾಗ, ಅಂತಹ ಸೌಹಾರ್ದ ಸಹಕಾರಿಗಳ ಬಗ್ಗೆ ವಿಚಾರಣೆ ಮಾಡುವುದು ಅವಶ್ಯಕವಾಗುತ್ತದೆ. ಅಂದರೆ ಸೌಹಾರ್ದ ಸಹಕಾರಿಗಳು ಜಾಗೃತ ಸದಸ್ಯರನ್ನು ಹೊಂದಿದ್ದು, ಸ್ವಾಯತ್ತ, ಸ್ವಾತಂತ್ರ್ಯ ಹಾಗೂ ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದಿದ್ದರೂ, ಪದಾಧಿಕಾರಿಗಳು, ಮಂಡಳಿ ಮತ್ತು ನೌಕರರು, ಇದೇ ವ್ಯಾಪ್ತಿಗಯಲ್ಲಿ ಕಾರ್ಯ ನಿರ್ವಹಿಸಬೇಕಾದ್ದರಿಂದ ತಪ್ಪುಗಳನ್ನು ಮಾಡಲು ಸಾಕಷ್ಟು ಪ್ರಚೋದನೆಗೆ ಸಿಲುಕಿ, ತಪ್ಪುಮಾಡಿದಾಗ ಅವುಗಳ ವಿಚಾರಣೆ ಅವಶ್ಯಕ. ಅದಕ್ಕಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಅಡಿ ಅವಕಾಶಕಲ್ಲಿಸಿದೆ.

ಕರ್ನಾಟಕ ಸೌಹಾರ್ದಕಾಯಿದೆಯಡಿ ವಿನೂತನ ವ್ಯವಸ್ಥೆ ಕಲ್ಪಿಸಿ, ಸದಸ್ಯ ಸಹಕಾರಿಗಳಲ್ಲಿ ನಿಯಂತ್ರಿಸುವ "ಸಂಯುಕ್ತ ಸಹಕಾರಿ" ಎಂಬ ಒಂದು ಶಾಸನಾತ್ಮಕ ಸಂಸ್ಥೆಯನ್ನು ಕಾಯಿದೆಯಲ್ಲಿಯೇ ಸೃಷ್ಟಿಸಿ, ನಿಬಂದಕರು ನಿರ್ವಹಿಸುವ ಹಲವಾರು ಅಧಿಕಾರಗಳನ್ನು ಈ ಸಂಯುಕ್ತ ಸಹಕಾರಿಗೆ ವರ್ಗಾಯಿಸಿದೆ. ಈ ಅಧಿಕಾರಗಳಲೂ ವಿಚಾರಣೆಗೆ ಸಂಬಂಧ ಪಟ್ಟಂತೆ ಕಾಯಿದೆ ಕಲಂ. 35, ಕಲಂ.65 ರಡಿ ಅವಕಾಶ ಕಲ್ಪಿಸಿದೆ. ಅದು ಈ ಕೆಳಕಂಡಂತಿದೆ.

**ಕಲಂ.35 : ವಿಚಾರಣೆ:–**

1. ರಿಜಿಸ್ಟ್ರಾರನು, ಒಂದು ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಹಣಕಾಸಿನ ಪರಿಸ್ಥಿತಿಗಳಿಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ವಿಷಯವನ್ನು ಕುರಿತು ತ್ವರಿತವಾಗಿ ವಿಚಾರಣೆ ನಡೆಸಬಹುದು ಅಥವಾ ವಿಚಾರಣೆ ನಡೆಸುವಂತೆ ಮಾಡಬಹುದು.

2. (1) ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವರೂಪದ ವಿಚರಣೆಯನ್ನು

(ಎ) ಸಹಕಾರಿಯು ಸಂಯೋಜಿತವಾಗಿರುವ ಸಂಯುಕ್ತ ಸಹಕಾರಿಯು;

(ಬಿ) ಸಹಕಾರಿಯ ಮಂಡಳಿಯ ಸದಸ್ಯರ ಪೈಕಿ ಮೂರನೇ ಒಂದರಷ್ಟುಕ್ಕೆ ಕಡಿಮೆಯಲ್ಲದ ಸದಸ್ಯರು;

ಅಥವಾ

(ಸಿ) ಸಹಕಾರಿಯ ಸದಸ್ಯರು ಒಟ್ಟು ಸಂಖ್ಯೆಯ ಪೈಕಿ ಹತ್ತನೇ ಒಂದರಷ್ಟಕ್ಕೆ ಕಡಿಮೆಯಲ್ಲದ ಸದಸ್ಯರು ಸಲ್ಲಿಸಿದ ಅರ್ಜಿಯ ಮೇಲೆ ನಡೆಸತಕ್ಕದ್ದು.

3 (2) ನೇ ಉಪ–ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ನಿಯಮಿಸಬಹುದಾದಂಥ ಶುಲ್ಕದ ಜೊತೆಗೆ ಸಲ್ಲಿಸತಕ್ಕದ್ದು.

4 ರಿಜಿಸ್ಟ್ರಾರನು, ತಾನೇ ಸ್ವತಃ ವಿಚಾರಣೆಯನ್ನು ನಡೆಸಬಹುದು ಅಥವಾ ವಿಚಾರಣೆಯನ್ನು ನಡೆಸಲು ಒಬ್ಬ ವಿಚಾರಣಾಧಿಕಾರಿಯನ್ನು ನೇಮಿಸಬಹುದು ವಿಚಾರಣೆಯ ವೆಚ್ಚವನ್ನು, ರಿಜಿಸ್ಟ್ರಾರನು ತೀರ್ಮಾನಿಸಬಹುದಾದಂತೆ, ಸಂದರ್ಭಾನುಸಾರ ಸಾಲಿಗೆ ಅಥವಾ ಸಂಯುಕ್ತ ಸಹಕಾರಿ ಅಥವಾ ಸಹಕಾರಿಯು ಭರಿಸತಕ್ಕದ್ದು.

5. (2) ನೇ ಉಪ–ಪ್ರಕರಣದ ಅಡಿಯಲ್ಲಿನ ಒಂದು ವಿಚಾರಣೆಯು, ಹನ್ನೆರಡು ತಿಂಬಳ ಅವಧಿಯೊಳಗೆ ಪೂರ್ಣಗೊಳ್ಳತಕ್ಕದ್ದು, ಆದಾಗ್ಯೂ, ರಿಜಿಸ್ಟ್ರಾರನು, ಕಾರಣಗಳನ್ನು ಲಿಖಿತದಲ್ಲಿ ದಾಖಲ್ಮಾಡಿ ಅದನ್ನು ಆರು ತಿಂಗಳ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು.

6. ಈ ಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸಿದಾಗ, ರಿಜಿಸ್ಟ್ರಾರನು, ವಿಚಾರಣಾ ವರದಿಯ ಒಂದು ಪ್ರತಿಯನ್ನು,–

(ಎ) ಅರ್ಜಿದಾರರಿಗೆ;

(ಬಿ) ಸಂಬಂಧಪಟ್ಟ ಸಹಕಾರಿಗೆ;

(ಸಿ) ಸಂಬಂಧಪಟ್ಟ ಎಲ್ಲಾ ಸಾಲಿಗರಿಗೆ;

(ಡಿ) ಸಂಯುಕ್ತ ಸಹಕಾರಿಗೆ, ಮತ್ತು

(ಇ) ಈ ಪ್ರಕರಣದ ಅಡಿಯಲ್ಲಿನ ವಿಚಾರಣೆಯು ಒಂದು ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಿದ್ದರೆ ರಿಜರ್ವ್ ಬ್ಯಾಂಕಿಗೆ, ಕಳುಹಿಸತಕ್ಕದ್ದು.)

**ಕಲಂ.65 : ವಿಚಾರಣೆ:–**

1. ಸಂಯುಕ್ತ ಸಹಕಾರಿಯು ಋಣಿಯಾಗಿರುವ ಸಾಲಿಗನ ಅಥವಾ ಸಂಯುಕ್ತ ಸಹಕಾರಿಯ ಮಂಡಳಿಯ ಮೂರನೇ ಒಂದರಷ್ಟಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಅಥವಾ ಸದಸ್ಯ ಸಹಕಾರಿಗಳ ಒಟ್ಟು ಸದಸ್ಯರ ಹತ್ತನೇ ಒಂದಕ್ಕೆ ಕಡಿಮೆಯಿಲ್ಲದಷ್ಟು ಸದ್ಯರ ಅರ್ಜಿಯ ಮೇರಿಗೆ, ರಿಜಿಸ್ಟ್ರಾರನು, ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಮತ್ತು ಕಾರ್ಯನಿರ್ವಹಣೆ ಮತ್ತು ಹಣಕಾಸು ಪರಿಸ್ಥಿತಿಗೆ ಸಂಬಂಧಿಸಿದಂತೆ ಅಂಥ ಅರ್ಜಿಯಲ್ಲಿ ಪ್ರಸ್ತಾಪಿಸಲಾದ ಯಾವುದೇ ವಿಷಯದ ಬಗ್ಗೆ ಕೂಡಲೇ ವಿಚಾರಣೆ ನಡೆಸತಕ್ಕದ್ದು ವಿಚಾರಣೆಯ ವೆಚ್ಚವನ್ನು ಸಾಲಿಗ ಅಥವಾ ಸಂಯುಕ್ತ ಸಹಕಾರಿ ಅಥವಾ ಸಂದರ್ಭಾನುಸಾರ ಸದಸ್ಯ ಸಹಕಾರಿಗಳು ಭರಿಸತಕ್ಕದ್ದು.

2. ರಿಜಿಸ್ಟ್ರಾರನು, ತಾನು ವಿಚಾರಣೆಯನ್ನು ಪ್ರಾರಂಭಿಸಲು ಉದ್ದೇಶಿಸಿದ ದಿನಾಂಕದ ಬಗ್ಗೆ ಸಂಯುಕ್ತ ಸಹಕಾರಿಗೆ ಹದಿನೈದು ದಿನಗಳಿಗೆ ಕಡಿಮೆಯಿಲ್ಲದಂತೆ ಲಿಖಿತದಲ್ಲಿ ಒಂದು ನೋಟೀಸನ್ನು ನೀಡತಕ್ಕದ್ದು: ಪರಂತು, ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ, ಅಲ್ಪಾವಧಿ ನೋಟೀಸನ್ನು ಹೊರಡಿಸಬಹುದು.

3. ವಿಚಾರಣೆಯನ್ನು, ವಿಚಾರಣೆಯ ಆದೇಶದ ದಿನಾಂಕದಿಂದ ಸಾಧ್ಯವಾದ ಮಟ್ಟಿಗೆ ಆರು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು, ಆದರೆ ಅಂಥ ಅವಧಿಯನ್ನು ವಿಶೇಷ ಸಂದರ್ಭಗಳಲ್ಲಿ ಆರು ತಿಂಗಳವರೆಗೆ ವಿಸ್ತರಿಸಿಕೊಳ್ಳಬಹುದು.

4. ರಿಜಿಸ್ಟ್ರಾರನು, ವಿಚಾರಣೆ ಪೂರ್ಣಗೊಂಡ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಸಂಯುಕ್ತ ಸಹಕಾರಿಗೆ ಮತ್ತು ಅರ್ಜಿದಾರನಿಗೆ ವಿಚಾರಣೆಯ ವರದಿಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

5. ಈ ಅಧಿನಿಯಮದ ಅಡಿಯಲ್ಲಿ ವಿಚಾರಣೆಯ ಉದ್ದೇಶಕ್ಕಾಗಿ, ರಿಜಿಸ್ಟ್ರಾರನು'

(ಎ) ವಿಚಾರಣೆಯ ಉದ್ದೇಶಕ್ಕಾಗಿ ತಾನು ಅವಶ್ಯವೆಂದರೆ ಪರಿಗಣಿಸುವಂಥ ರಸೀತಿಗಳು, ಓಚರುಗಳು, ಹೇಳಿಕೆಗಳು, ವಿವರಪಟ್ಟಿಕೆಗಳು, ಪತ್ರ– ವ್ಯವಹಾರಗಳು, ನೋಟೀಸು ಅಥವಾ ಇತರ ಯಾವುದೇ ದಾಸ್ತಾವೇಜುಗಳನ್ನು ಹಾಜರುಪಡಿಸುವಂತೆ ಅಧ್ಯಕ್ಷರು ಅಥವಾ ಸಭಾಪತಿ, ಉಪಾಧ್ಯಕ್ಷರು ಅಥವಾ ಉಪಸಭಾಪತಿ ಅಥವಾ ಯಾವೊಬ್ಬ ನಿರ್ದೇಶಕ, ಪದಾಧಿಕಾರಿ ಅಥವಾ ಅಧಿಕಾರಿ ಅಥವಾ ಸಂಬಂಧಪಟ್ಟ ಇತರ ಯಾವೊಬ್ಬ ಪ್ರಾಧಿಕಾರಿಯನ್ನು ಅಗತ್ಯಪಡಿಸಬಹುದು; ಮತ್ತು

(ಬಿ) ಸಂಯುಕ್ತ ಸಹಕಾರಿಗೆ ಸೇರಿದ ಅಥವಾ ಅದರ ಅಭಿರಕ್ಷೆಯಲ್ಲಿರುವ ಪುಸ್ತಕಗಳು, ಲೆಕ್ಕಪತ್ರಗಳು, ದಸ್ತಾವೇಜುಗಳು, ಭದ್ರತೆಗಳು, ನಗದು ಮತ್ತು ಇತರ ಸ್ವತ್ತುಗಳನ್ನು ಯಾವುದೇ ಸಮಯದಲ್ಲಿ ನೋಡುವ ಮುಕ್ತ ಅವಕಾಶವಿರತಕ್ಕದ್ದು ಮತ್ತು ಯಾವುದೇ ಇತರ ಸ್ವತ್ತುಗಳ ಸ್ವಾಧೀನತೆಯನ್ನು ಹೊಂದಿರುವ ಅಥವಾ ಅದರ ಅಭಿರಕ್ಷೆಗೆ ಜವಾಬ್ದಾರನಾಗಿರುವ ಯಾವೊಬ್ಬ ವ್ಯಕ್ತಿಯನ್ನು ಅವನು ಯಾವುದೇ ಸರ್ಕಾರಿ ಕಛೇರಿಯಲ್ಲಿ ಅಥವಾ ಸಂಯುಕ್ತ ಸಹಕಾರಿಯ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಹಾಜರುಪಡಿಸುವಂತೆ ಸಮನು ಮಾಡಬಹುದು;

ಸಂಯುಕ್ತ ಸಹಕಾರಿಯ ಯಾವುದೇ ವ್ಯವಹಾರಗಳ ಅರಿವಿದೆಯೆಂದು ತಾನು ನಂಬಲು ಕಾರಣವಿರುವ ಯಾವೊಬ್ಬ ವ್ಯಕ್ತಿಯನ್ನು ಸರ್ಕಾರಿ ಕಛೇರಿಯಲ್ಲಿ ಅಥವಾ ಸಂಯುಕ್ತ ಸಹಕಾರಿಯ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ತನ್ನ ಮುಂದೆ ಹಾಜರಾಗುವಂತೆ ಸಮನು ಮಾಡಬಹುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸಬಹುದು.

ಇದರ ಹೊರತಾಗಿ ಪ್ರತಿಯೊಂದು ಸದಸ್ಯ ಸಹಕಾರಿ ಕಾರ್ಯನಿರ್ವಹಣೆ ಬಗ್ಗೆ ಲೆಕ್ಕಪತ್ರ ತಪಾಸಣೆ ಮಾಡಲು ಕಲಂ. 32 ಮತ್ತು ಕಲಂ.33ರಲ್ಲಿ ಅವಕಾಶ ಕಲ್ಪಿಸಿದೆ. ಸದಸ್ಯ ಸಹಕಾರಿಗಳ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡಿ ವರದಿ ನೀಡಲು ಲೆಕ್ಕಾಧಿಕಾರಿ ನೇಮಕ, ವರದಿ ಸಲ್ಲಿಕೆ, ವರದಿ ಮೇರೆ ಕ್ರಮಗಳ ಬಗ್ಗೆ, ಸ್ಪಷ್ಟೀಕರಣ ನೀಡಿದೆ. ಈ ವರದಿಯಲ್ಲಿ ಕಾಣಿಸದ ನ್ಯೂನತೆಗಳ ಬಗ್ಗೆ ವಿಷರ್ಷಿಸಿ ತೀರ್ಮಾನ ಮತ್ತು ಕ್ರಮಜರುಗಿಸಲು ಸಂಯುಕ್ತ ಸಹಕಾರಿಗೆ ಅಧಿಕಾರ ನಿಡಿದೆ. ಇದರ ಜೊತೆಗೆ ಕಾಯಿದೆ ಕಲಂ. 53(7)(ಯು) ಅಡಿ.

"ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು" ಎಂದು. ಸಂಯುಕ್ತ ಸಹಕಾರಿ ನಿರ್ವಹಿಸಲು ಅವಕಾಶ ಕಲ್ಪಿಸಿದೆ. ಇದರಿಂದ ಸಂಯುಕ್ತ ಸಹಕಾರಿ ಕ್ಷೇತ್ರ ಸಿಬ್ಬಂದಿ ಸದಸ್ಯ ಸಹಕಾರಿಗಳ ಕಾರ್ಯ ನಿರ್ವಹಣೆ ಬಗ್ಗೆ ಪರಿಶೀಲಿಸಿ, ವರದಿ ಪಡೆದ ನಂತರ ಕ್ರಮ ಜರುಗಿಸಲು ಸಂಯುಕ್ತ ಸಹಕಾರಿಯ ಮಂಡಳಿ ಜವಾಬ್ದಾರಿ ನಿರ್ವಹಿಸಬೇಕು.

ಇದರ ಜೊತೆಗೆ 07.10.2021 ರಿಂದ ಜಾರಿಗೆ ಬರುವಂತೆ ಕಾಯಿದೆ ಕಲಂ. 61ಕ್ಕೆ ಹೊಸದಾಗಿ(2)(ಎಲ್–5) ಎಂದು ಈ ಕೆಳಕಂಡಂತೆ ತಿದ್ದುಪಡಿ ಮಾಡಿದೆ.

"ಸದಸ್ಯ ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯ ನಿರ್ವಹಣೆ ಆಥವಾ ಆರ್ಥಿಕ ಸ್ಥಿತಿಗತಿಯ ಕುರಿತಾದ ಯಾವುದೇ ನಿರ್ದಿಷ್ಠ ವಿಷಯದ ಬಗ್ಗೆ ಸ್ವಯಂ ಪ್ರೇರಿತವಾಗಿ ವಿಚಾರಣೆಯನ್ನು ನಡೆಸಬಹುದು" ಅಥವಾ ವಿಚಾರಣೆ ನಡೆಸುವಂತೆ ಮಾಡಬಹುದು ಮತ್ತು ಈ ತಿದ್ದುಪಡಿ ಮಾಡಲಾಗಿರುವುದು ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯ ನಿರ್ವಾಹಕನ ಪ್ರಕಾರ್ಯಗಳಡಿ ಸೇರಿಸಲಾಗಿದೆ. ಕಲಂ.35 ಮತ್ತು ಕಲಂ. 65ರಡಿ ಈಗಾಗಲೇ ಇರುವ ವಿಚಾರಣೆಯಲ್ಲಿ ಉಲ್ಲೇಖಿಸಿರುವ ಪದಗಳ ಈ ತಿದ್ದುಪಡಿಸಯಲ್ಲಿ ಉಪಯೋಗಿಸದೆ. 2004ರ ಪೂರ್ವದಲ್ಲಿ ಕಲಂ. 35ರಡಿ ವಿಚಾರಣೆ ಮಾಡುವ ಅಧಿಕಾರ ಸಂಯುಕ್ತ ಸಹಕಾರಿಗೆ ಇದನ್ನು ಮಾರ್ಪಡಿಸಿ ನಿಬಂಧಕರಿಗೆ ವಹಿಸಲಾಗಿದೆ.

ಈ ಲೇಖನದ ಮುಖ್ಯ ಉದ್ದೇಶ ಸದಸ್ಯ ಸಹಕಾರಿಗಳ ಕಾರ್ಯ ನಿರ್ವಹಣೆ ಬಗ್ಗೆ ಕಲಂ. 35ರಡಿ ಇದ್ದ ವಿಚಾರಣೆ ಅಧಿಕಾರವನ್ನು ನಿಬಂಧಕರು ನಿರ್ವಹಿಸುವುದು. ಅದೇ ಅಧಿಕಾರವನ್ನು ಹೆಚ್ಚುವರಿ ಹೊಣೆ ಸಂಯುಕ್ತ ಸಹಕಾರಿ ಮುಖ್ಯ ಕಾರ್ಯನಿರ್ವಾಹಕನ ಪ್ರಕರಣಗಳಲ್ಲಿ 20121ರಲ್ಲಿ ಸೇರ್ಪಡೆ ಮಾಡಿದ ಉದ್ದೇಶದಲ್ಲಿ ಸ್ಪಷ್ಟತೆ ಎಲ್ಲ. ಸಾಮಾನ್ಯವಾಗಿ ಶಾಸನ ಮಾಡುವಾಗ ಇತ್ತೀಚಿನ ಸೇರ್ಪಡೆ ಮಾಡಿದಾಗ ಹಿಂದಿನ ಕಲಂಗೆ ಅಷ್ಟೇ ಪ್ರಶಸ್ತ್ಯ ಇರುವುದಿಲ್ಲ. ಹಾಗೂ ಇತ್ತೀಚಿನ ತಿದ್ದುಪಡಿಗೆ ಆದ್ಯತೆ ನೀಡಬೇಕು ಎಂದು ತಿಳಿಯಬೇಕು. ಅಂದರೆ ನಿಬಂದಕರಿಗೆ ಇರುವ ಶಾಸನಾತ್ಮಕ ಜವಾಬ್ದಾರಿಯು ಸಂಯುಕ್ತ ಸಹಕಾರಿ ಮುಖ್ಯ ಕಾರ್ಯ ನಿರ್ವಹಕನಿಗೆ ವರ್ಗಾಯಿಸಿದಂತಾಗುತ್ತದೆಯಲ್ಲವೇ? ಇದರಿಂದಾಗುವ ಪರಿಣಾಮವನ್ನು ಸರ್ಕಾರ ಪರಿಶೀಲಿಸಬೇಕಲ್ಲವೇ?

ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನ ನೇಮಕ ಸಂಯುಕ್ತ ಸಹಕಾರಿ ಮಂಡಳಿ ಮಾಡುತ್ತಿದೆ. ಅಂದರೆ ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಮಂಡಳಿ ನೇಮಕ ಮಾಡಿದ ನೌಕರರ ಮತ್ತು ಅವನಿಗೆ ಪ್ರತ್ಯೇಕ ಶಾಸನಾತ್ಮಕ ಅಧಿಕಾರ ಇರುವುದಲ್ಲ. ಸಂಯುಕ್ತ ಸಹಕಾರಿಗೆ ಕಲಂ.53(7) ರಲ್ಲಿ, ಕಲಂ. 25, ಕಲಂ. 38 ಹಾಗೂ ಕಲಂ.38ಎ ಅಡಿ ನೀಡಿದ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ತಮ್ಮ ಮಂಡಳಿ ಮುಖಾಂತರ ಜಾರಿಮಾಡಬೇಕು.

ಮುಖ್ಯ ಕಾರ್ಯನಿರ್ವಾಹಕ, ಸದಸ್ಯ ಸಹಕಾರಿಗಳ ಮೇಲೆ ಮಾಡಿದ ಪರಿವೀಕ್ಷಣೆ, ವಿಚಾರಣೆ, ತಪಾಸಣೆ ವರದಿಗಳನ್ನು ಸಂಯುಕ್ತ ಸಹಕಾರಿ ಮಂಡಳಿಗೆ ಮಂಡಿಸಿ, ಅದರ ತೀರ್ಮಾನದಂತೆ ಜಾರಿಮಾಡಬೇಕು. ಆದರೆ ಕಲಂ. 61(2)(ಎಲ್–5) ರಡಿ ನೀಡಿದ ಅಧಿಕಾರವನ್ನು ಸ್ವಯಂ ನಿರ್ವಹಿಸಲು ಅಧಿಕಾರ ನಿಡಿದೆ. ಅಂದರೆ ಸಂಯುಕ್ತ ಸಹಕಾರಿ ಮಂಡಳೀಗೆ ಮೀರಿದ ಅಧಿಕಾರವನ್ನು ಅದರ ಮುಖ್ಯ ಕಾರ್ಯನಿರ್ವಾಹಕನಿಗೆ ಶಾಸನಾತ್ಮಕ ತಿದ್ದುಪಡಿಯಿಂದ ಪ್ರಸ್ತಾಪಿಸಿದೆ. ಇದಕ್ಕೆ ಮಂಡಳಿ ಮದ್ಯ ಪ್ರವೇಶಮಾಡಲಾಗದು. ಇದರಿಂದಾಗುವ ಪರಿಣಾಮದ ಬಗ್ಗೆ ವಿಮರ್ಷಸುವುದು ಅಗತ್ಯ.

ಸಂಯುಕ್ತ ಸಹಕಾರಿ ಮಂಡಳಿ ನೇಮಿಸಿದ ಮುಖ್ಯ ಕಾರ್ಯನಿರ್ವಾಹಕನಿಗೆ ಒತ್ತಡ ತಂದು ಆದೇಶ ಮಾಡಿಸಲು, ಸಂಯುಕ್ತ ಸಹಕಾರಿ ಮಂಡಳಿ ಮತ್ತು ಅದರ ಸದಸ್ಯರು ಮುಖ್ಯ ಕಾರ್ಯನಿರ್ವಾಹಕ ತಿರಸ್ಕರಿಸಲು ಸಾಧ್ಯವೇ? ಅಂದರೆ ಒತ್ತಡ ತಂದು, ಮಂಡಳಿ ಸದಸ್ಯರು ತಮ್ಮ ಜವಾಬ್ದಾರಿಯಿಂದ ನುಚಿಣಿಕೊಳ್ಳಲು ಪ್ರಯತ್ನ ಪಡುವುದಿಲ್ಲವೆ. ಏಕೆಂದರೆ ಮುಖ್ಯ ಕಾರ್ಯನಿರ್ವಾಹಕನು ಅದೇ ಮಂಡಳಿ ಜೊತೆ ಕಾರ್ಯನಿರ್ವಹಿಸಬೇಕು, ಇಂತಹ ಪ್ರಸಂಗದಲ್ಲಿ ಮುಖ್ಯ ಕಾರ್ಯನಿರ್ವಾಹಕನ ವ್ಯಕ್ತಿಪರ ವ್ಯಕ್ತಿತ್ವ ಎಷ್ಟಿರಬೇಕು ಅಂದರೆ ಒತ್ತಡಕ್ಕೆ ಮಣಿಯದೆ ಅವಶ್ಯಕತೆ ಬಂದಾಗ ಮಾತ್ರ, ವಿಚಾರಣೆ ನಡೆಸುವ ಪ್ರಭುತ್ವತೆ ಪ್ರದರ್ಶಿಸಲು ಅವಕಾಶ ಇದ್ದರೆ, ಇದು ಸಾಧ್ಯವೇ? ಆರೀತಿ ಮಾಡದಿದ್ದರೆ ಮಂಡಳಿ ಸದಸ್ಯರು ಮುಖ್ಯ ಕಾರ್ಯನಿರ್ವಹಕನಿಗೆ ತೊಂದರೆ ಮಾಡಲು ಮುಂದಾದರೆ ಅವರು ದಿನ ನಿತ್ಯದ ಕೆಲಸದಲ್ಲಿ ಅಡೆತಡೆ ಒಡ್ಡಿದರೆ ಸಹಕಾರಿ ಸದಸ್ಯರ ಹಿತಾಶಕ್ತಿ ಕಾಪಾಡಲು ಸಾದ್ಯವೇ? ಇದರ ವಿರುದ್ದವಾಗಿ ಮುಖ್ಯ ಕಾರ್ಯ ನಿರ್ವಾಹಕನೆ ತನ್ನ ಮನಬಂದಂತೆ ವಿಚಾರಣೆ ಆದೇಶ ಮನಾಡಿದಾಗ, ಅಂದರೆ ಅಗತ್ಯಕ್ಕಿಂತ ಹೆಚ್ಚು ಅಧಿಕಾರ ಚಲಾಯಿಸಿದಾಗ, ಆಗುವ ಪರಿಣಾಮವನ್ನು ಸರ್ಕಾರ ತಿದ್ದುಪಡಿ ಮಾಡುವ ಪೂರ್ವದಲ್ಲಿ ವಿಮರ್ಷೆ ಮಾಡಬೇಕಿತ್ತು.

**ಉಪಸಂಹಾರ:–**

ಸೌಹಾರ್ದ ಕಾಯಿದೆ ಯಡಿ ವಿಚಾರಣೆಗೆ ಮಾಡಿರುವ ಅವಕಾಶಗಳನ್ನು ಗಮನಿಸಿದಾಗ 2004ರಲ್ಲಿ ಕಲಂ.35ರಡಿ ಸದಸ್ಯ ಸಹಕಾರಿಗಳ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಆರ್ಥಿಕ ಸ್ಥಿತಿಗಳ ಬಗ್ಗೆ ವಿಚಾರಣೆ ಮಾಡಲು ಕಲ್ಪಿಸಿದ್ದ ಅವಕಾಶಕ್ಕೆ 2021ರಲ್ಲಿ ಸಂಯುಕ್ತ ಸಹಕಾರಿಯು ಮುಖ್ಯ ಕಾರ್ಯನಿರ್ವಾಹಕನಿಗೆ ಅದೇ ಅಧಿಕಾರವನ್ನು ನಿಬಂಧಕರ ಹೊರತಾಗಿ ಸೇರಿಸಿದ್ದು, ಇದರಿಂದ ಕಲಂ.35ರ ನಂತರ ಸೇರಿಸಿದ ಅವಕಾಶವನ್ನು ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತದೆ. ಅಂದರೆ ನಿಬಂಧಕರ ಕಾರ್ಯವ್ಯಾಪ್ತಿಗಿಂತ ಹೆಚ್ಚಿನ ಅಧಿಕಾರವನ್ನು ಸಂಯುಕ್ತ ಸಹಕಾರಿಯು ಮುಖ್ಯ ಕಾರ್ಯನಿರ್ವಾಹಕನಿಗೆ ನೀಡಿದಂತಾಗುತ್ತದೆ. ಇದರ ಜೊತೆಗೆ ಸೌಹಾರ್ದ ಕಾಯಿದೆಯಲ್ಲಿ ಶಾಸನಾತ್ಮಕ ಅಧಿಕಾರ ಚಲಾಯಿಸಲು ಸಂಯುಕ್ತ ಸಹಕಾರಿ ಮಂಡಳಿಗೆ ಇರುವ ಅಧಿಕಾರಕ್ಕಿಂತ ಅದರ ಕಾರ್ಯಾಂಗದ ಮುಖ್ಯಸ್ಥನಿಗೆ ನೀಡಿದೆ. ಅಂದರೆ ಮುಖ್ಯ ಕಾರ್ಯನಿರ್ವಾಹಕನಿಗೆ ಜವಾಬ್ದಾರಿಯನ್ನು ಹೆಚ್ಚಿಸಿದ್ದು, ಇದು ಸಂಯುಕ್ತ ಸಹಕಾರಿಯ ಮಂಡಳಿ ಸದಸ್ಯರಿಗೆ, ಅವರು ಪ್ರತಿನಿಧಿಸುವ ಸಹಕಾರಿ ಬಗ್ಗೆ ಸ್ವಯಂ ಸ್ಫೂರ್ತಿಯಿಂದ ವಿಚಾರಣೆಗೆ ಅದೇಶಿಸಿದರೆ, ಆಗುವ ಆಭಾಸವನ್ನು ಗಮನಿಸಬಹುದು. ಮತ್ತೆ ಸಂಯುಕ್ತ ಸಹಕಾರಿಯು ಮಂಡಳಿ ಸದಸ್ಯರ ಒತ್ತಡಕ್ಕೆ ಸಿಲುಕಿ, ಸಂಯುಕ್ತ ಸಹಕಾರಿಯು ಮುಖ್ಯ ಕಾರ್ಯನಿರ್ವಾಹಕ ನಿಷ್ಕ್ರಿಯವಾಗುವಂತೆ ಮಾಡಬಹುದು. ಇದಕ್ಕೆ ಸಂಯುಕ್ತ ಸಹಕಾರಿಯು ಮುಖ್ಯ ಕಾರ್ಯನಿರ್ವಾಹಕ ತನ್ನ ದೃಡಚಿತ್ತ, ಆತ್ಮ ವಿಶ್ವಾಸ, ವೃತ್ತಿಪರ ಪ್ರವೃತ್ತಿಯಿಂದ, ಕಾರ್ಯ ನಿರ್ವಹಿಸುವಂತೆ ಮಾಡಿದಾಗ ಮಾತ್ರ ಹೊಸದಾಗಿ ಸೇರ್ಪಡೆಮಾಢಿದ ಕಲಂ.61(2)(ಎಲ್–5)ನಲ್ಲಿ ನೀಡಿದ ಅಧಿಕಾರವನ್ನು ನಿರ್ವಹಿಸಲು ಸಾಧ್ಯವಾಗಬಹುದು. ಅಂದರೆ ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ, ಈ ಅಧಿಕಾರವನ್ನು ಚಲಾಯಿಸುವಾಗ ನಿಷ್ಠುರವಾದಿ, ದೃಡಸಂಕಲ್ಪ ಮತ್ತು ವೃತ್ತಿಪರ ಆಡಳಿತ ನೀಡಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಕಲಂ. 35ನ್ನು ನಿಬಂಧಕರ ವ್ಯಾಪ್ತಿಗೆ 2004ರಲ್ಲಿ ನೀಡಿದ್ದು, 2021ರಲ್ಲಿ ಕಾಯಿದೆ ತಿದ್ದುಪಡಿ ಮೂಲಕ ಕಲಂ.61(2)(ಎಲ್–5)ಅಡಿ ನೀಡಿದ ಅಧಿಕಾರವನ್ನು ನೀಡಲಾಗಿದೆ. ಎಂದು ಭಾವಿಸಬಹುದು. ಇದನ್ನು ಚುನಾಯಿತ ಮಂಡಳಿಗೆ ಬದಲಾಗಿ ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಿಗೆ ನಿಡಿರುವುದು, ಆ ಹುದ್ದೆಗೆ ಮತ್ತು ಸೌಹಾರ್ದ ಕಾಯಿದೆಗೆ ಬಲ ನೀಡಿದಂತಾಗುತ್ತದೆ.

# ಚಂದ್ರಯಾನ - 3 - ಯಶಸ್ವಿಯ ಹಿಂದೆ ನಾರಿ ಶಕ್ತಿ -'ರಾಕೆಟ್ ವುಮನ್ಸ್' (Rocket Women)

– ಶ್ರೀಮತಿ ಸವಿತ ಎನ್. ಇ. ಕರಾಸೌಸಂಸನಿ., ಬೆಂಗಳೂರು

## ಚಂದ್ರಯಾನ ಇತಿಹಾಸ

ಚಂದ್ರಯಾನ ಎಂದರೆ ಚಂದ್ರನ ಮೇಲೆ ಪ್ರಯಾಣಿಸುವ, ಅಥವಾ ಚಂದ್ರ ವಾಹನ pronunciation ಇದು ಭಾರತದ ಮೊಟ್ಟಮೊದಲ ಮಾನವರಹಿತ ಚಂದ್ರ ಶೋಧಕ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ವಿಜ್ಞಾನಿಗಳು ಇದನ್ನು ಅಕ್ಟೋಬರ್ 2008ರಲ್ಲಿ ಬಾಹ್ಯಾಕಾಶಕ್ಕೆ ಉಡಾಯಿಸಿದರು. ಇದು ಆಗಸ್ಟ್ 2009ರ ತನಕ ಕಾರ್ಯನಿರ್ವಹಿಸಿತ್ತು. ಈ ಯಾತ್ರೆಯಲ್ಲಿ ಚಂದ್ರನ ಉಪಗ್ರಹ ಮತ್ತು ಒಂದು ಇಂಪ್ಯಾಕ್ಟರ್ ಸಹ ಸೇರಿದ್ದವು. ನವೀಕೃತ ಆವೃತ್ತಿಯಾದ ಮೂಲಕ ಗಗನನೌಕೆಯನ್ನು 22 ಅಕ್ಟೋಬರ್ 2008ರಂದು 06:22 ಸಮಯದಲ್ಲಿ ಉಡಾಯಿಸಲಾಯಿತು. ಚೆನ್ನೈನಿಂದ 80 ಕಿಮೀ ಉತ್ತರದಲ್ಲಿರುವ, ಆಂಧ್ರ ಪ್ರದೇಶದನೆಲ್ಲೂರು ಜಿಲ್ಲೆಯ ಶ್ರೀಹರಿಕೋಟಾ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಈ ಗಗನನೌಕೆಯನ್ನು ಉಡಾಯಿಸಲಾಯಿತು. ಚಂದ್ರನ ನೆಲವನ್ನು ಶೋಧಿಸಲು ಭಾರತವು ತನ್ನದೇ ಆದ ತಂತ್ರಜ್ಞಾನ ಸಂಶೋಧಿಸಿ ಅಭಿವೃದ್ಧಿಗೊಳಿಸಿದ್ದರಿಂದ ಚಂದ್ರಯಾನ ಯೋಜನೆಯಿಂದ ಭಾರತದ ಬಾಹ್ಯಾಕಾಶ ಯೋಜನೆಗೆ ಮಹತ್ವದ ಉತ್ತೇಜನ ಲಭಿಸಿತು. 8 ನವೆಂಬರ್ 2008ರಂದು ಚಂದ್ರಯಾನಕ್ಕೆ ತೆರಳಿದ ವಾಹನವನ್ನು ಚಂದ್ರನ ಕಕ್ಷೆಯಲ್ಲಿ ಯಶಸ್ವಿಯಾಗಿ ಅಳವಡಿಸಲಾಯಿತು. ಈ ಯೋಜನೆಯ ಅಂದಾಜು ವೆಚ್ಚ □386 ಕೋಟಿ. ಚಂದ್ರ ಉಪಗ್ರಹವು ಉಡ್ಡಯನದ ಸಮಯದಲ್ಲಿ 1,380 ಕಿಲೋಗ್ರಾಂನಷ್ಟು ತೂಕವನ್ನು ಹೊಂದಿತ್ತು. ಚಂದ್ರನ ಮೇಲ್ಮೈಯ ಸರ್ವೇಕ್ಷಣೆ ನಡೆಸಿ, ಅದರ ರಾಸಾಯನಿಕ ಗುಣಗಳು ಹಾಗೂ ಮೂರು ಆಯಾಮಗಳ ಪ್ರದೇಶದ ಸಂಪೂರ್ಣ ನಕ್ಷೆಯನ್ನು ತಯಾರಿಸುವ ಉದ್ದೇಶವಿತ್ತು.

ಚಂದ್ರ ಅಭಿಯಾನದಲ್ಲಿ ISROದ ಐದು ಉಪಕರಣಗಳು, ಹಾಗೂ, ನಾಸಾ, ಇಖಂ ಮತ್ತು ಬಲ್ಗಾರಿಯನ್ ಏರೊಸ್ಪೇಸ್ ಏಜೆನ್ಸಿ ಸೇರಿದಂತೆ ಇತರೆ ಬಾಹ್ಯಾಕಾಶ ಸಂಸ್ಥೆಗಳಿಂದ ಆರು ಉಪಕರಣಗಳನ್ನು ಉಚಿತವಾಗಿ ಒಯ್ಯಲಾಯಿತು. ಇಡೀ ಪ್ರಪಂಚವೇ ಕಾತರದಿಂದ ಕಾಯುತ್ತಿದ್ದ, ಭಾರತದ ಕನಸಿನ ಯೋಜನೆ ಚಂದ್ರಯಾನ 3 ದಿನಾಂಕ 14.07.2023 ಇಸ್ರೋ ಕೇಂದ್ರದಿಂದ ಯಶಸ್ವಿಯಾಗಿ ಬಾಹ್ಯಾಕಾಶ ಕಕ್ಷೆಗೆ ಉಡಾವಣೆಗೊಂಡಿದೆ. ಹಲವು ವಿಜ್ಞಾನಿಗಳ ಪರಿಶ್ರಮದ ಫಲವಾಗಿ ನಿನ್ನೆ ಚಂದ್ರಯಾನ 3 ಯೋಜನೆ ಯಶಸ್ವಿಯಾಗಿ ಬಾಹ್ಯಾಕಾಶ ಕಕ್ಷೆಗೆ ತಲುಪಿದೆ. ಚಂದ್ರಯಾನ 3 ಯೋಜನೆ ಹಾಗೂ ಇದರ ಯಶಸ್ವಿ ಉಡಾವಣೆಯ ಹಿಂದೆ ಹಲವಾರು ವಿಜ್ಞಾನಿಗಳ ಪರಿಶ್ರಮವಿದೆ. ದೇಶದ ಬೇರೆ ಬೇರೆ ಜಿಲ್ಲೆಗಳ ವಿಜ್ಞಾನಿಗಳು ಈ ಯೋಜನೆಗಾಗಿ ಹಗಲು ಇರುಳು ಕೆಲಸ ಮಾಡಿದ್ದಾರೆ.



ಆಂಧ್ರಪ್ರದೇಶದ ಶ್ರೀ ಹರಿಕೋಟಾ ಸತೀಶ್ ಧವನ್ ಉಪಗ್ರಹ ಉಡಾವಣಾ ಕೇಂದ್ರದಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆ ಉಡಾವಣೆ ಮಾಡಿದ ಚಂದ್ರಯಾನ 3ರ ತಂಡದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಯುವತಿ ಭಾಗವಹಿಸಿದ್ದರು. ಜಿಲ್ಲೆಯ ಜನರ ಸಂತಸ ಸಂಭ್ರಮಕ್ಕೆ ಕಾರಣವಾಗಿದೆ.

ಚಿಕ್ಕಮಗಳೂರು ಜಿಲ್ಲೆಯ, ಬಾಳೆಹೊನ್ನೂರು ಸಮೀಪದ ತುಪ್ಪೂರು ಗ್ರಾಮದ ಯುವತಿ ಇರುವುದು ಆ ಜಿಲ್ಲೆಗೆ ಮಾತ್ರವಲ್ಲದೇ ನಮ್ಮ ರಾಜ್ಯಕ್ಕೆ ಹೆಮ್ಮೆ ತಂದಿದೆ. ಬಾಳೆಹೊನ್ನೂರು ನಗರದಲ್ಲಿ ಕಾಫಿ ವ್ಯವಹಾರ ಮಾಡುತ್ತಿರುವ ಕೇಶವ ಮೂರ್ತಿ, ಮಂಗಳ ದಂಪತಿಯ ಪುತ್ರಿ ಡಾ. ಕೆ. ನಂದಿನಿ ಚಂದ್ರಯಾನ 3 ತಂಡದಲ್ಲಿ ಇದ್ದು, ದಿನಾಂಕ 14.07.2023ರಂದು ನಡೆದ ಯಶಸ್ವಿ ಉಡಾವಣೆಯಲ್ಲಿಯೂ ಈಕೆ ಪಾಲ್ಗೊಂಡಿರುವುದು ಆಕೆಯ ಕುಟುಂಬಸ್ಥರು ಸೇರಿದಂತೆ ಸ್ಥಳೀಯರಲ್ಲಿ ಸಂತೋಷ ಹಾಗೂ ಸಂಭ್ರಮ ಸಡಗರ ತರಿಸಿದೆ. ಡಾ. ನಂದಿನಿ ಕಳೆದ 8 ವರ್ಷಗಳಿಂದ ಬೆಂಗಳೂರಿನ ಇಸ್ರೋ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇವರು 2019 ರ ಚಂದ್ರಯಾನ 2 ರ ತಂಡದಲ್ಲೂ ಭಾಗವಹಿಸಿದ್ದರು. ಸತತ ಎರಡನೇ ಬಾರಿಯೂ ಕಾರ್ಯನಿರ್ವಹಿಸಿ ಬಾಳೆಹೊನ್ನೂರಿಗೆ ಕೀರ್ತಿ ತರುವುದರ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಡಾ. ಕೆ. ನಂದಿನಿ ಅವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಾಳೆಹೊನ್ನೂರಿನ ನಿರ್ಮಲಾ ಕಾನ್ವೆಂಟ್‌ನಲ್ಲಿ ಮಾಡಿ, ನಂತರ 12ನೇ ತರಗತಿಯವರೆಗೆ ಸೀಗೋಡು ಜವಾಹರ್ ನವೋದಯ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದರು. ನಂತರ ಮೂಡುಬಿದ್ರೆಯ ಆಳ್ವಾಸ್ ವಿದ್ಯಾ ಸಂಸ್ಥೆಯಲ್ಲಿ ಬಿಎಸ್ಸಿ, ಎಂಎಸ್ಸಿ ವಿದ್ಯಾಭ್ಯಾಸ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸುರತ್ಕಲ್‌ನಲ್ಲಿ ಪೂರೈಸಿದ್ದಾರೆ. ಇದೇ ಸಂಸ್ಥೆಯಲ್ಲಿ 5 ವರ್ಷಗಳ ಪಿಎಚ್‌ಡಿ ಪೂರೈಸಿ, ನಂತರ ಬೆಂಗಳೂರು ಇಸ್ರೋದಲ್ಲಿ ಉದ್ಯೋಗದಲ್ಲಿದ್ದಾರೆ. ಅಲ್ಲದೇ ಅವರ ಹುಟ್ಟುಹಬ್ಬದ ದಿನದಂದೇ ಮಹತ್ವದ ಕಾರ್ಯ ನಡೆದಿದ್ದು, ಕುಟುಂಬದವರಲ್ಲಿ ಹರ್ಷ ಮನೆ ಮಾಡಿದೆ. ನನ್ನ ಮಗಳು ಇನ್ನಷ್ಟು ಸಾಧನೆ ಮಾಡಲಿ, ಇನ್ನಷ್ಟು ಎತ್ತರಕ್ಕೆ ಬೆಳೆಯಲಿ, ರಾಜ್ಯ

ಹಾಗೂ ರಾಷ್ಟ್ರಕ್ಕೆ ಉತ್ತಮ ಹೆಸರು ತರಲಿ ಎಂದು ಅವರ ತಂದೆ ಕೇಶವ ಮೂರ್ತಿ ಹಾರೈಸಿದ್ದಾರೆ. ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಮಹತ್ತರ ಸಾಧನೆಯನ್ನು ಸಾಧನೆಯನ್ನು ಮಾಡಿದೆ. ಮೂರನೇ ಬಾರಿಗೆ ಚಂದ್ರಯಾನ-3 ಅನ್ನು ಉಡಾವಣೆ ಮಾಡಲಾಗಿದೆ.

ಆಂಧ್ರ ಪ್ರದೇಶದ ಶ್ರೀಹರಿಕೋಟಾ ಸತೀಶ್ ಧವನ್ ಉಪಗ್ರಹ ಉಡಾವಣಾ ಕೇಂದ್ರದಲ್ಲಿ ಚಂದ್ರಯಾನ 3ರ ರಾಕೇಟ್‌ನ್ನು ಉಡಾವಣೆ ಮಾಡಲಾಗಿದೆ. ಸುಮಾರು 40 ದಿನಗಳ ಬಳಿಕ ರಾಕೆಟ್ ಚಂದ್ರನ ಅಂಗಳಕ್ಕೆ ಕಾಲಿಡಲಿದೆ. ಈ ಮಧ್ಯೆ ಕನ್ನಡಿಗರಿಗೂ ಒಂದು ಸಂತಸದ ಸುದ್ದಿ ಸಿಕ್ಕಿದೆ. ಅದೇನಪ್ಪಾ ಅಂದ್ರೆ, ನಿನ್ನೆ ಇಸ್ರೋ ಉಡಾವಣೆ ಮಾಡಿದ ಚಂದ್ರಯಾನ-3ರ ವಿಜ್ಞಾನಿಗಳ ತಂಡದಲ್ಲಿ ಕನ್ನಡಿಗರೂ ಒಬ್ಬರು ಇದ್ದರು ಅನ್ನೋದು. ಹೌದು.. ಭಾರತ ಬಹು ಕನಸಿನ ಚಂದ್ರಯಾನ-3ರ ಯೋಜನೆಯ ವಿಜ್ಞಾನಿಗಳ ತಂಡದಲ್ಲಿ ಕರ್ನಾಟಕ ಮೂಲದ ಮಹಿಳಾ ವಿಜ್ಞಾನಿಯೊಬ್ಬರು ಇದ್ದರು. ಬಾಳೆಹೊನ್ನೂರು ಪಟ್ಟಣದಲ್ಲಿ ಕಾಫಿ ಉದ್ಯಮ ನಡೆಸುತ್ತಿರುವ ಕೇಶವಮೂರ್ತಿ ಮತ್ತು ಮಂಗಳ ದಂಪತಿ ಪುತ್ರಿ ಡಾ. ಕೆ.ನಂದಿನಿ ಅವರು ಕೂಡ ಚಂದ್ರಯಾನ 3 ತಂಡದಲ್ಲಿ ಕೆಲಸ ಮಾಡಿ ಯಶಸ್ವಿ ಉಡಾವಣೆಯಲ್ಲಿ ಪಾಲು ಪಡೆದಿದ್ದಾರೆ. ಡಾ. ಕೆ.ನಂದಿನಿ ಅವರು ಬಾಳೆಹೊನ್ನೂರು ಸಮೀಪದ ತುಪ್ಪೂರು ಗ್ರಾಮದ ಯುವತಿಯಾಗಿದ್ದು, ವಿಶೇಷ ಅಂದ್ರೆ ಚಂದ್ರಯಾನ -3 ಉಡಾವಣೆ ನಡೆದ ನಿನ್ನೆಯ ದಿನವೇ ಅವರ ಜನ್ಮದಿನವೂ ಆಗಿತ್ತು. ಡಾ.ನಂದಿನಿ ಕಳೆದ 8 ವರ್ಷಗಳಿಂದ ಬೆಂಗಳೂರಿನ ಇಸ್ರೋ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇವರು 2019ರ ಚಂದ್ರಯಾನ 2ರ ತಂಡದಲ್ಲೂ ಭಾಗವಹಿಸಿದ್ದರು. ಪಿಯುಸಿ ತನಕ ಹುಟ್ಟೂರಿನಲ್ಲಿ ವಿದ್ಯಾಭ್ಯಾಸ ಮಾಡಿರುವ ಡಾ.ನಂದಿನಿ, ಪದವಿಯಿಂದ ಪಿಹೆಚ್‌ಡಿ ತನಕ ಎಲ್ಲಾ ವಿದ್ಯಾಭ್ಯಾಸವನ್ನು ಮಂಗಳೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಪೂರೈಸಿದ್ದಾರೆ. ಬಳಿಕ ಬೆಂಗಳೂರು ಇಸ್ರೋದಲ್ಲಿ ಉದ್ಯೋಗ ಪಡೆದುಕೊಂಡಿದ್ದರು. ಇಷ್ಟು ಮಾತ್ರವಲ್ಲದೇ ಕನ್ನಡ ವಿಜ್ಞಾನಿಗಳಾದ ಮಂಗಳೂರಿನ ಸುಮಾ, ಬೆಳಗಾವಿಯ ಪ್ರಕಾಶ್ ಪಡ್ನೇಕರ್ ಕೂಡ ಚಂದ್ರಯಾನ-3ರ ತಂಡದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿ ನಾಡಿಗೆ ಕೀರ್ತಿ ತಂದಿದ್ದಾರೆ.



ಶ್ರೀಮತಿ ರಿತು ಕರಿಧಾಲ್ ರವರು ಒಬ್ಬ ಭಾರತೀಯ ವಿಜ್ಞಾನಿ. ಪ್ರಸ್ತುತ ಅವರು ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ(ಇಸ್ರೋ) ಜೊತೆ ಕೆಲಸ ಮಾಡುತ್ತಿದ್ದಾರೆ. ಇವರು ಭಾರತದ ಮಾರ್ಸ್ ಆರ್ಬಿಟರ್ ಮಿಷನ್, ಮಂಗಳಯಾನದ ಉಪ ಕಾರ್ಯಾಚರಣೆ ನಿರ್ದೇಶಕರಾಗಿದ್ದರು. ಏರೋಸ್ಪೇಸ್ ಎಂಜಿನಿಯರ್ ಆಗಿರುವ ಇವರು ಭಾರತದ "ರಾಕೆಟ್ ವುಮನ್" ಎಂದು ಖ್ಯಾತರಾಗಿದ್ದಾರೆ. ಶ್ರೀಮತಿ ರಿತು ಕರಿಧಾಲ್ ಎಂ.ಎಸ್ಸಿ ಲಕ್ನೋ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಮತ್ತು ನಂತರ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಎಂ.ಟೆಕ್. ಮಾಡಿದ್ದಾರೆ. ಇವರು ಯಾವಾಗಲೂ ಬಾಹ್ಯಾಕಾಶದ ಬಗ್ಗೆ ಆಕರ್ಷಣೆಯನ್ನು ಹೊಂದಿದ್ದವರಾಗಿದ್ದರು.

ಅವರು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿ ಹಿರಿಯ ವಿಜ್ಞಾನಿಯಾಗಿದ್ದು, ಮಾರ್ಸ್ ಆರ್ಬಿಟರ್ ಮಿಷನ್ ಅನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ, ಇದು ತನ್ನ ಮೊದಲ ಪ್ರಯತ್ನದಲ್ಲಿ ಮಂಗಳವನ್ನು ತಲುಪಿದ ಮೊದಲ ಮಿಷನ್ ಎಂಬ ಇತಿಹಾಸವನ್ನು ಸೃಷ್ಟಿಸಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ಸಾಮಾನ್ಯ ಪ್ರವೃತ್ತಿಗಿಂತ ಭಿನ್ನವಾಗಿ ಏನನ್ನಾದರೂ ಮಾಡಬೇಕೆಂಬ ತುಡಿತವಿತ್ತು. ISRO ಅಥವಾ NASA ದಿಂದ ಯಾವುದೇ ಬಾಹ್ಯಾಕಾಶ ಚಟುವಟಿಕೆಗಳಿಗೆ ಸಂಬಂಧಿಸಿದ ಸುದ್ದಿ ಲೇಖನಗಳನ್ನು ಸಂಗ್ರಹಿಸುವುದು ಅವರ ಹವ್ಯಾಸಗಳಲ್ಲಿ ಒಂದಾಗಿತ್ತು. ಲಕ್ನೋ ನಗರದಲ್ಲಿ ಅವರ ಶಾಲಾ ದಿನಗಳಲ್ಲಿ ಬಾಹ್ಯಾಕಾಶ ಸಂಸ್ಥೆಗೆ ಸೇರುವ ಕನಸು 1997, ನವೆಂಬರ್‌ನಲ್ಲಿ ನನಸಾಯಿತು. ಅವರು ಇಸ್ರೋದ ಅನೇಕ ಪ್ರತಿಷ್ಠಿತ ಮಿಷನ್‌ಗಳಿಗಾಗಿ ಕೆಲಸ ಮಾಡಿದ್ದಾರೆ ಮತ್ತು ಅನೇಕ ಕಾರ್ಯಾಚರಣೆಗಳಿಗೆ ಆಪರೇಷನ್ ಡೈರೆಕ್ಟನ್ ಜವಾಬ್ದಾರಿಯುತ ಸ್ಥಾನವನ್ನು ಸಹ ನಿರ್ವಹಿಸಿದ್ದಾರೆ. ಶ್ರೀಮತಿ ರಿತು ಕರಿದಾಲ್ ಅವರು ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಪ್ರಕಟಣೆಗಳಲ್ಲಿ 20ಕ್ಕೂ ಹೆಚ್ಚು ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಪ್ರಾಜೆಕ್ಟ್ ಮ್ಯಾನೇಜರ್ ಮತ್ತು ಡೆಪ್ಯೂಟಿ ಆಪರೇಷನ್ ಡೈರೆಕ್ಟರ್ ಆಗಿರುವ ಅವರು, ತಮ್ಮ ತಂಡದೊಂದಿಗೆ, ಲೀವಿಂಗ್ ಅರ್ಥ್ ಮತ್ತು ಕ್ಯಾಪ್ಚರಿಂಗ್ ಮಾರ್ಸ್‌ನ ನಿರ್ಣಾಯಕ ಕಾರ್ಯಾಚರಣೆಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಹೊಂದಿದ್ದರು.

ಶ್ರೀಮತಿ ರಿತುರವರು "2007 ರಲ್ಲಿ ಭಾರತದ ಅಂದಿನ ರಾಷ್ಟ್ರಪತಿ ಶ್ರೀ ಅಬ್ದುಲ್ ಕಲಾಂ ಅವರಿಂದ ಯುವ ವಿಜ್ಞಾನಿ ಪ್ರಶಸ್ತಿ," "2015 ರಲ್ಲಿ ಮಾಮ್ಗಾಗಿ ಇಸ್ರೋ ತಂಡ ಪ್ರಶಸ್ತಿ", "ಎಎಎಸ್‌ಐ ತಂಡ ಪ್ರಶಸ್ತಿ", "ಏರೋಸ್ಪೇಸ್ನಲ್ಲಿ ಮಹಿಳಾ ಸಾಧಕರು, ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. 2017" ಖಖಂಖಖ (ಸೊಸೈಟಿ ಆಫ್ ಇಂಡಿಯನ್ ಏರೋಸ್ಪೇಸ್ ಟೆಕ್ನಾಲಜೀಸ್ & ಇಂಡಸ್ಟ್ರೀಸ್ (SIATI), ಬ್ಯಾಂಕ್ ಆಫ್ ಬರೋಡಾದಿಂದ "ಬಿರ್ಲಾ ಸನ್ ಅಚೀವ್ಮೆಂಟ್ ಅವಾರ್ಡ್". ಪ್ರಸ್ತುತ ಅವರು ಖಖಖಔನ ಚಂದ್ರನ ಮೇಲಿನ ಮೊದಲ ಲ್ಯಾಂಡಿಂಗ್ ಮಿಷನ್ ಅಂದರೆ ಚಂದ್ರಯಾನ-2ಗಾಗಿ ಕೆಲಸ ಮಾಡುತ್ತಿದ್ದಾರೆ

30ನೇ ಪುಟಕ್ಕೆ.....

# ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳು, ಆಯೋಗಗಳು ಹಾಗೂ ಮುಂದಿನ ದಾರಿ (ಭಾಗ - 02)

– ಮೂಲ : ಆರ್. ಮುರಳೀಧರನ್, ಪುದುಚೇರಿ ನಾಗರೀಕ ಸೇವೆ (ನಿವೃತ್ತ), ನಿರ್ದೇಶಕರು, ಕ್ಯಾಟಲಿಸ್ಟ್ (ತರಬೇತಿದಾರರು)

– ಅನುವಾದ : ಶ್ರೀಮತಿ ದಿವ್ಯ ಟಿ, ಹಿರಿಯ ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಮೇ 2023ರ ಸಂಚಿಕೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ 14 ವಿವಿಧ ಸಮಿತಿಗಳು ಹಾಗೂ ಆಯೋಗಗಳ ಸಾರಾಂಶಗಳನ್ನು ನೀಡಿದ್ದು, ಮುಂದುವರೆದ ಸಮಿತಿ ಹಾಗೂ ಆಯೋಗಗಳ ಸಾರಾಂಶಗಳು ಈ ಲೇಖನದಲ್ಲಿದೆ. ಈ ಲೇಖನದಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳು ಮತ್ತು ಆಯೋಗಗಳನ್ನೊಳಗೊಂಡಿದ್ದು, ಆ ಸಮಯದಲ್ಲಿನ ಶಿಫಾರಸ್ಸುಗಳ ಪಕ್ಷಿನೋಟವನ್ನು ಸಂಕ್ಷಿಪ್ತಗೊಳಿಸಲಾಗಿದ್ದು, ಓದುಗರಿಗೆ ಇದೊಂದು ಅದ್ಭುತ ಪಯಣ.**

### • ತಕ್ಕಾವಿ ಸಾಲಗಳ ಸಮಿತಿ (1962)

ತಕ್ಕಾವಿ ಸಾಲವು ಬಡ ರೈತರಿಗೆ ಬೀಜಗಳು, ರಸಗೊಬ್ಬರಗಳು, ಉಪಕರಣಗಳನ್ನು ಖರೀದಿಸಲು ಮತ್ತು ಕೃಷಿ ಇತರ ಉದ್ದೇಶಗಳಿಗಾಗಿ ನೀಡುವ ಅಲ್ಪಾವಧಿ ಸಾಲವಾಗಿದೆ. ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಸಚಿವಾಲಯವು ಜುಲೈ 1961ರಲ್ಲಿ ಬಿಪಿ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ತಕ್ಕಾವಿ ಸಾಲಗಳ ಸಮಿತಿಯನ್ನು ರಚಿಸಿತು. ರೈತರಿಗೆ ತಕ್ಕಾವಿ ಸಾಲಗಳ ಪೂರೈಕೆಗಾಗಿ ಅಸ್ತಿತ್ವದಲ್ಲಿರುವ ವ್ಯವಸ್ಥೆಗಳನ್ನು ಪರಿಶೀಲಿಸಲು ಮತ್ತು ಸಹಕಾರಿ ಸಂಸ್ಥೆಗಳ ಮೂಲಕ ತಕ್ಕಾವಿ ಸಾಲಗಳನ್ನು ನೀಡಲು ಮಾರ್ಗನಿರ್ದೇಶನ ನೀತಿಯ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸುವ ಕ್ರಮಗಳನ್ನು ಸೂಚಿಸಿತು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಶಿಫಾರಸ್ಸಿನಂತೆ ಕೃಷಿಕರಿಗೆ ಸಹಕಾರಿ ಸಂಸ್ಥೆಗಳ ಮೂಲಕ ತಕ್ಕಾವಿ ಸಾಲ ಮತ್ತು ಇತರ ಸೌಲಭ್ಯಗಳು ಲಭ್ಯವಾಗುವಂತೆ ಪ್ರತಿಯೊಬ್ಬ ಕೃಷಿಕರು ಮತ್ತು ಕಾರ್ಮಿಕರು ಗ್ರಾಮ ಸಹಕಾರಿ ಸಂಘಕ್ಕೆ ಸೇರಲು ಅನುಕೂಲವಾಗುವಂತೆ ಮಾಡಬೇಕು. ಆದ್ದರಿಂದ, ಭಾರತ ಸರ್ಕಾರವು ಸಹಕಾರಿ ಸಂಸ್ಥೆಗಳ ಮೂಲಕ ತಕ್ಕಾವಿ ಸಾಲವನ್ನು ನೀಡುವಂತೆ ರಾಜ್ಯ ಸರ್ಕಾರಗಳಿಗೆ ವಿನಂತಿಸಿತು.

### • ಸಹಕಾರಿ ಆಡಳಿತ ಸಮಿತಿ (1963)

ಇಲಾಖಾ ಸ್ಥಾಪನೆಯನ್ನು ಪರಿಶೀಲಿಸಲು ಮತ್ತು ವಿವಿಧ ಹಂತಗಳಲ್ಲಿ ಇಲಾಖಾ ಆಡಳಿತ ಸಿಬ್ಬಂದಿಯನ್ನು ಬಲಪಡಿಸಲು ಶಿಫಾರಸ್ಸುಗಳನ್ನು ಸೂಚಿಸಲು ವಿಎಲ್ ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಸಹಕಾರ ಸಂಘಗಳ ರಿಜಿಸ್ಟ್ರಾರ್ ಐಎಎಸ್ ಅಧಿಕಾರಿಯೊಂದಿಗೆ ಎರಡು ವರ್ಷಗಳ ತರಬೇತಿಯನ್ನು ಹೊಂದಿರಬೇಕು ಎಂದು ಸಮಿತಿಯು ಶಿಫಾರಸ್ಸು ಮಾಡಿತು. ಲೆಕ್ಕಪರಿಶೋಧನೆ, ಪತ್ತು ಮತ್ತು ಬ್ಯಾಂಕಿಂಗ್, ಮಾರ್ಕೆಟಿಂಗ್ ಮತ್ತು ಸಂಸ್ಕರಣೆ, ಕೈಗಾರಿಕಾ ಸಂಘಗಳು, ಸಂಘಗಳ ರಚನೆ ಮತ್ತು ಗ್ರಾಹಕ ಸಂಘಗಳಿಗೆ ಜಂಟಿ ರಿಜಿಸ್ಟ್ರಾರ್ ಇರಬೇಕು. ಲೆಕ್ಕಪರಿಶೋಧನೆಗಾಗಿ ಪ್ರತ್ಯೇಕ ವಿಭಾಗವನ್ನು ಹೊಂದಲು ಸಮಿತಿಯು ಸಲಹೆಯನ್ನು ನೀಡಿತು.

### • ಎಂಎಲ್ ದಂಟ್ವಾಲ ಸಮಿತಿ (1964)

ಸಹಕಾರಿ ಮಾರುಕಟ್ಟೆಯ ಸಂಘಟನೆಯ ಮಾದರಿಯನ್ನು ಪರಿಶೀಲಿಸಲು ಮತ್ತು ಸಹಕಾರಿ ಆಧಾರದ ಮೇಲೆ ಕೃಷಿ ಮಾರುಕಟ್ಟೆಯ ಉತ್ತಮ ಮತ್ತು ತ್ವರಿತ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಶಿಫಾರಸ್ಸುಗಳನ್ನು ಮಾಡಲು ಭಾರತ ಸರ್ಕಾರವು ಸಹಕಾರಿ ಮಾರುಕಟ್ಟೆ ಸಮಿತಿಯನ್ನು ನೇಮಿಸಿತು. ಸಂಸ್ಥೆಯ ಭವಿಷ್ಯದ ಮಾದರಿಗಾಗಿ ಮಾರ್ಕೆಟಿಂಗ್ ಸೊಸೈಟಿಗಳು, ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಸೊಸೈಟಿಗಳು ಮತ್ತು ಮಂಡಿ ಮಟ್ಟದಲ್ಲಿ ಪ್ರಾಥಮಿಕ ಸೊಸೈಟಿಗಳ ಎರಡು ಹಂತದ ರಚನೆಯನ್ನು ಸಮಿತಿಯು ಶಿಫಾರಸ್ಸು ಮಾಡಿತು. ಹಾಗೆಯೇ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಮತ್ತು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಇದರ ಮೂಲಕ ತಮ್ಮ ಕೃಷಿ ಉತ್ಪಾದನೆಯ ಅವಶ್ಯಕತೆಗಳನ್ನು ಖರೀದಿಸಬೇಕು ಎಂದು ಸಮಿತಿಯು ಶಿಫಾರಸ್ಸು ಮಾಡಿತು.

### • ಮಿರ್ಧಾ ಆರ್‌ಎನ್ ಸಮಿತಿ (1964)

ಸಮಪರ್ಕವಲ್ಲದ ಸಂಘಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳನ್ನು ತೊಡೆದುಹಾಕುವ ಮೂಲಕ ಸಹಕಾರ ಚಳುವಳಿಯ ಸರಿಯಾದ ಅಭಿವೃದ್ಧಿಗೆ ಕ್ರಮಗಳನ್ನು ಸೂಚಿಸಲು ಭಾರತ ಸರ್ಕಾರವು ಈ ಸಮಿತಿಯನ್ನು ರಚಿಸಿತು. ವರದಿಯಲ್ಲಿ ಸಹಕಾರಿ ಚಳುವಳಿಯಲ್ಲಿ ಸಮಪರ್ಕವಲ್ಲದ ಸಮಸ್ಯೆಯ ಗಾತ್ರವನ್ನು ನಿರ್ಣಯಿಸಿ, ಚಳುವಳಿಯು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಮತ್ತು ಕೆಲವು ದುಷ್ಕೃತ್ಯಗಳನ್ನು ದೊಡ್ಡದಾಗಿಸಿ ತೀರ್ಮಾನಕ್ಕೆ ಬರುವುದು ತಪ್ಪು ಎಂಬ ತೀರ್ಮಾನಕ್ಕೆ ಬಂದಿತು. ಚಳುವಳಿಯು ಸಮಪರ್ಕ ಸಂಘಗಳಿಂದ ತುಂಬಿತ್ತು. ಆದಾಗ್ಯೂ, ಸಮಿತಿಯು ತಪ್ಪು ಪ್ರವೃತ್ತಿಗಳನ್ನು ಜಯಿಸಲು ಕೆಲವು ಸಲಹೆಗಳನ್ನು ನೀಡಿತು, ಅಂದರೆ, ಸಹಕಾರಿ ತರಬೇತಿ ಮತ್ತು ಶಿಕ್ಷಣ, ರಿಜಿಸ್ಟ್ರಾರ್‌ನಿಂದ ಸ್ವತಂತ್ರವಾದ ಸಂಸ್ಥೆಯಿಂದ ಸಂಘಗಳ ನಿಯಮಿತ ಲೆಕ್ಕಪರಿಶೋಧನೆ, ಸರ್ಕಾರದ ನೆರವು ಇತ್ಯಾದಿ.

ಕಛೇರಿಯ ಅಧಿಕಾರವನ್ನು ಹೊಂದಿರುವ ಅವಧಿಗಳ ಸಂಖ್ಯೆ ಮತ್ತು ಸಂಘಗಳ ಸಂಖ್ಯೆಯ ಮಾನದಂಡಗಳಿಗೆ ಶಾಸನಬದ್ಧ ನಿರ್ಬಂಧಗಳನ್ನು ಹೇರುವ ಅಗತ್ಯವಿಲ್ಲ ಎಂದು ಸಮಿತಿಯು ಶಿಫಾರಸ್ಸು ಮಾಡಿತು. ಈ ಸಮಿತಿಯ ಪ್ರಕಾರ, ಚುನಾವಣೆಯನ್ನು ಸಾಮಾನ್ಯ ಸಭೆಯಿಂದ ನಿರ್ವಹಿಸಬೇಕು ಮತ್ತು ರಿಜಿಸ್ಟ್ರಾರ್‌ನಿಂದ ಅಲ್ಲ. ಸಹಕಾರಿ ಸಂಘಗಳ ನಿರ್ವಹಣೆಯಲ್ಲಿ ಕನಿಷ್ಠ ಸಂಖ್ಯೆಯ ಸರ್ಕಾರಿ ನಾಮನಿರ್ದೇಶನಗಳನ್ನು

ಹೊಂದಲು ಸಮಿತಿಯು ಶಿಫಾರಸ್ಸು ಮಾಡಿತು.

- **ಆಲ್ ಇಂಡಿಯಾ ರೂರಲ್ ಕ್ರೆಡಿಟ್ ರಿವ್ಯೂ ಸಮಿತಿ (1966)**

ಯೋಜನಾ ಆಯೋಗದ ಸದಸ್ಯರಾದ ವೆಂಕಟಪ್ಪಯ್ಯ ಅವರ ಅಧ್ಯಕ್ಷತೆಯಲ್ಲಿ ಭಾರತದಲ್ಲಿ ಗ್ರಾಮೀಣ ಸಾಲದ ಪೂರೈಕೆಯನ್ನು ಪರಿಶೀಲಿಸಲು ಅಖಿಲ ಭಾರತ ಗ್ರಾಮೀಣ ಸಾಲ ಪರಿಶೀಲನಾ ಸಮಿತಿಯನ್ನು ಆರ್‌ಬಿಐ ನೇಮಿಸಿತು. ಸಮಿತಿಯು ಸಹಕಾರಿ ಸಾಲ ವ್ಯವಸ್ಥೆಯ ಕೆಲವು ನ್ಯೂನ್ಯತೆಗಳನ್ನು ಎತ್ತಿ ತೋರಿಸಿತು ಮತ್ತು ಸುಧಾರಣೆಗೆ ಅಮೂಲ್ಯವಾದ ಸಲಹೆಗಳನ್ನು ನೀಡಿತು. ಸಹಕಾರಿ ಸಂಘಗಳನ್ನು ಸಾಮಾನ್ಯವಾಗಿ ರೈತರ ಸಂಸ್ಥೆಗಳಾಗಿ ನೋಡದೇ ಸರ್ಕಾರದ ಭಾಗವಾಗಿ ನೋಡಲಾಗುತ್ತದೆ ಎಂದು ಸಮಿತಿಯು ಗಮನಿಸಿತು. 1951–52ರಲ್ಲಿ 93%ರಷ್ಟಿದ್ದ ಒಟ್ಟು ಕೃಷಿ ಸಾಲದ ಸಾಂಸ್ಥಿಕೇತರ ಮೂಲಗಳು 1961–62ರಲ್ಲಿ ಇನ್ನೂ 81%ರಷ್ಟನ್ನು ಹೊಂದಿವೆ ಎಂಬ ತೀರ್ಮಾನಕ್ಕೆ ಸಮಿತಿಯು ಬಂದಿತು. ಮಿತಿಮೀರಿದ ಬಾಕಿಗಳು ಭಾರೀ ಪ್ರಮಾಣದಲ್ಲಿರುವುದಲ್ಲದೇ ವರ್ಷದಿಂದ ವರ್ಷಕ್ಕೆ ಏರುತ್ತಿವೆ ಎಂದು ಅದು ಗಮನಿಸಿತು.

- **ಪಿಆರ್ ದುಭಾಶಿ ಸಮಿತಿ (1972)**

**ಸಮಿತಿಯು ಪ್ರಸ್ತಾಪಿಸಿದ ಸಮಸ್ಯೆಗಳೆಂದರೆ :** (ಎ) ವೃತ್ತಿಪರ ನಿರ್ವಹಣೆಯ ಅಳವಡಿಕೆ, (ಬಿ) ಠೇವಣಿ ಮತ್ತು ವಿಮೆಗಳ ವಿಸ್ತರಣೆ, (ಸಿ) ಬಾಕಿ ಉಳಿದಿರುವ ಕೆಲಸ–ವ್ಯಾಜ್ಯದ ಗುಣಮಟ್ಟ, ನೂರು ಪ್ರತಿಶತ ಲೆಕ್ಕಪರಿಶೋಧನೆ, ಸಾಲದ ಪ್ರಸ್ತಾಪಗಳ ಭದ್ರತೆ, ದಾಖಲಾತಿ, ಸಾಲ ವಸೂಲಾತಿ ಯೋಜನೆ, ಸದಸ್ಯತ್ವ ಮಂಜೂರು, ದಾಖಲೆಗಳ ನಿರ್ವಹಣೆ, ಉಪವಿಧಿಗಳ ಪರಿಷ್ಕರಣೆ, ರಿಜಿಸ್ಟ್ರಾರ್ ಅಧಿಕಾರ, ನ್ಯಾಯಾಲಯದ ಕಾರ್ಯವಿಧಾನಗಳು, ನ್ಯಾಯಾಲಯದಲ್ಲಿ ಮೇಲ್ಮನವಿಗಳ ಸ್ವರೂಪ, ಎಲ್ಲಾ ರೀತಿಯ ಸಹಕಾರ ಸಂಘಗಳಿಗೆ ಸಾಮಾನ್ಯ ಕಾನೂನು ಇತ್ಯಾದಿ.

- **ಬ್ಯಾಂಕಿಂಗ್ ಆಯೋಗದ ವರದಿ (1972)**

ಬ್ಯಾಂಕಿಂಗ್ ಆಯೋಗವನ್ನು ಭಾರತ ಸರ್ಕಾರವು ಹಿರಿಯ ಸಹಕಾರಿ ಆರ್‌ಸಿ ಸಾರಯ್ಯ ಅವರ ಅಧ್ಯಕ್ಷತೆಯಲ್ಲಿ ರಚಿಸಿತು. ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕ್‌ಗಳ ನಡುವಿನ ಸಮನ್ವಯದ ವಿಧಾನಗಳನ್ನು ವರದಿಯು ಸೂಚಿಸಿತು. ಕೇವಲ ಸಾಲವನ್ನು ಒದಗಿಸುವುದರ ಮೇಲೆ ಗಮನ ಕೇಂದ್ರೀಕರಿಸಿದರೆ ಸಾಕಾಗುವುದಿಲ್ಲ, ಸಾಲದ ಅನ್ವಯದ ಮೇಲ್ವಿಚಾರಣೆಗೆ ಒತ್ತು ನೀಡಬೇಕು ಮತ್ತು ಸಾಲಗಾರನಿಗೆ ಅವರ ಕಾರ್ಯಾಚರಣೆಯಲ್ಲಿ ಮಾರ್ಗದರ್ಶನ ನೀಡಬೇಕು ಎಂದು ಆಯೋಗವು ಒತ್ತಿ ಹೇಳಿತು.

- **ಸಹಕಾರಿ ಭೂಮಿ ಅಭಿವೃದ್ಧಿ ಬ್ಯಾಂಕುಗಳ ಸಮಿತಿಯ ವರದಿ (1974)**

ಮಾಧವ್ ದಾಸ್ ನೇತೃತ್ವದ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್‌ಗಳ ಸಮಿತಿಯು ಭೂ ಅಭಿವೃದ್ಧಿ ಬ್ಯಾಂಕಿಂಗ್‌ನ ಸಂಯುಕ್ತ ಮತ್ತು ಏಕೀಕೃತ ರಚನೆಯು ತನ್ನದೇ ಆದ ಅನುಕೂಲಗಳು ಮತ್ತು ಅನಾನುಕೂಲಗಳನ್ನು ಹೊಂದಿದೆ ಎಂದು ಗಮನಿಸಿತು. ಪ್ರಾಥಮಿಕ ಕ್ರೆಡಿಟ್ ಸೊಸೈಟಿಗಳು ದೀರ್ಘಕಾಲೀನ ಸಾಲಗಳನ್ನು ಭೂ ಅಭಿವೃದ್ಧಿ ಬ್ಯಾಂಕ್‌ಗಳ ಏಜೆಂಟ್‌ಗಳಾಗಿ ಪರಿಣಾಮಕಾರಿಯಾಗಿ ಒದಗಿಸುವ ಸ್ಥಿತಿಯಲ್ಲಿರುವುದಿಲ್ಲ ಎಂದು ಸಮಿತಿಯು ಅಭಿಪ್ರಾಯಪಟ್ಟಿತು.

- **ಭಾರತೀಯ ರಿಸರ್ವ್ ಬ್ಯಾಂಕಿನ ಸ್ಟಡಿ ಟೀಮ್ ಆನ್ ಓವರ್ ಡ್ಯೂಸ್ (1974)**

ಸಹಕಾರಿ ಸಂಸ್ಥೆಗಳಿಂದ ಸಾಲ ಬಾಕಿ ಇರುವ ಸಮಸ್ಯೆಗಳನ್ನು ಅಧ್ಯಯನ ಮಾಡಲು ಮತ್ತು ಸಮಸ್ಯೆಗಳನ್ನು ನಿಭಾಯಿಸಲು ಕ್ರಮಗಳನ್ನು ಸೂಚಿಸಲು ಡಾ.ಡೇಟ್ಲೆ ಸ್ಟಡಿ ಟೀಮ್ ಅನ್ನು ಆರ್‌ಬಿಐ ನೇಮಿಸಿತು. ಪ್ರಾಥಮಿಕ ಹಂತದಲ್ಲಿ ರೂ.377 ಕೋಟಿಗಳಲ್ಲಿ ಉದ್ದೇಶಪೂರ್ವಕವಲ್ಲದ ಸುಸ್ಥಿದಾರ ಖಾತೆ ಕೇವಲ ರೂ.100 ಕೋಟಿಗಳಷ್ಟು ಬಾಕಿ ಇದೆ ಎಂದು ವರದಿ ಅಂದಾಜಿಸಿತು. ಅವಧಿ ಮೀರಿದಕ್ಕೆ ಸಮಿತಿಯು ಸೂಚಿಸಿದ ಮುಖ್ಯ ಕಾರಣಗಳು: (i) ದೋಷಪೂರಿತ ಸಾಲ ನೀತಿಗಳು ಮತ್ತು ವಿವೇಚನಾರಹಿತ ಸಾಲ ಕಾರ್ಯಾಚರಣೆ; (ii) ಅಸಮರ್ಪಕ ಮೇಲ್ವಿಚಾರಣೆ ಮತ್ತು ಸರಿಯಾದ ನಿರ್ವಹಣೆಯ ಅನುಪಸ್ಥಿತಿ; (iii) ಕ್ರೆಡಿಟ್ ಮತ್ತು ಮಾರ್ಕೆಟಿಂಗ್ ಅನ್ನು ಸಂಪರ್ಕಿಸಲು ವಿಫಲವಾಗಿದೆ; (iv) ವಸೂಲಾತಿಯನ್ನು ಜಾರಿಗೊಳಿಸಲು ಅಥವಾ ಮರುಕಳಿಸುವ ಮತ್ತು ಉದ್ದೇಶಪೂರ್ವಕ ಸುಸ್ಥಿದಾರರ ವಿರುದ್ಧ ಬಲವಾದ ಕ್ರಮವನ್ನು ತೆಗೆದುಕೊಳ್ಳಲು ನಿರ್ವಹಣೆಯ ಕಡೆಯಿಂದ ಇಚ್ಛಾ ಕೊರತೆ; (v) ಬಾಕಿ ಮರುಪಾವತಿಗೆ ಅನುಕೂಲಕರ ಮತ್ತು ಸೌಹಾರ್ದಯುತ ವಾತಾವರಣವನ್ನು ಸೃಷ್ಟಿಸುವ ಬಗ್ಗೆ ಕೆಲವು ರಾಜ್ಯ ಸರ್ಕಾರಗಳ ನಿರಾಸಕ್ತಿ.

- **ಸಹಕಾರಿ ಕ್ರೆಡಿಟ್ ಸಂಸ್ಥೆಗಳ ಏಕೀಕರಣ ಸಮಿತಿಯ ವರದಿ (1976)**

ಆರ್.ಕೆ.ಹಜಾರಿ ನೇತೃತ್ವದ ಸಹಕಾರಿ ಕ್ರೆಡಿಟ್ ಸಂಸ್ಥೆಗಳ ಏಕೀಕರಣ ಸಮಿತಿಯು ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲ ರಚನೆಯ ಏಕೀಕರಣವನ್ನು ಸೂಚಿಸಿದೆ. ಸಮಿತಿಯ ದೃಷ್ಟಿಯಲ್ಲಿ, ವಿಭಾಗೀಕರಣದ ವಿಧಾನದಿಂದಾಗಿ ಅಲ್ಪಾವಧಿಯ ಮತ್ತು ದೀರ್ಘಾವಧಿಯ ರಚನೆಯ ದ್ವಿರೂಪದ ಮಾದರಿಯು ತೊಂದರೆಗಳನ್ನು ಸೃಷ್ಟಿಸಿದೆ. ರೈತರು ವಿವಿಧ ಸಾಲ ಸೌಲಭ್ಯಗಳು ಮತ್ತು ಸೇವೆಗಳಿಗಾಗಿ ವಿವಿಧ ಮೂಲಗಳನ್ನು ಸಂಪರ್ಕಿಸಬೇಕಾಗುತ್ತದೆ ಮತ್ತು ಅವರ ಸಂಯೋಜಿತ ಅಗತ್ಯಗಳ ಕಾರಣದಿಂದಾಗಿ ಒಂದು–ಸಂಪರ್ಕ ಬಿಂದುವಿನ ಅನುಪಸ್ಥಿತಿಯು ತೊಂದರೆಗಳನ್ನು ಸೃಷ್ಟಿಸಿದೆ.

- **ರಾಷ್ಟ್ರೀಯ ಕೃಷಿ ಆಯೋಗದ ವರದಿ (1976)**

ಭಾರತೀಯ ಕೃಷಿ ಮತ್ತು ಸಂಬಂಧಿತ ಸಮಸ್ಯೆಗಳ ವಿವಿಧ ಅಂಶಗಳ ಬಗ್ಗೆ ವಿಚಾರಣೆ ನಡೆಸಿದ ರಾಷ್ಟ್ರೀಯ ಕೃಷಿ ಆಯೋಗವು 'ಪೋಷಕ ಸೇವೆ ಮತ್ತು ಪ್ರೋತ್ಸಾಹ'ಗಳನ್ನು ವಿಶೇಷವಾಗಿ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್‌ಗಳಿಂದ ಸಾಲವನ್ನು ಒದಗಿಸುವುದನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿದೆ, ಆಯೋಗದ ಅಂದಾಜಿನಲ್ಲಿ, ಸಾಂಸ್ಥಿಕ ಮತ್ತು ಸಾಂಸ್ಥಿಕವಲ್ಲದ ಏಜೆನ್ಸಿಗಳು

ಕೃಷಿ ಸಾಲದ ಅವಶ್ಯಕತೆಗಳನ್ನು ಪೂರೈಸುತ್ತಿವೆ. ಆದಾಗ್ಯೂ, ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳ ಸಂಯೋಜಿತ ಪಾಲು ಅಂದಾಜು ಅಗತ್ಯದ ಶೇ.40 ರಷ್ಟನ್ನು ಮೀರಿಲ್ಲ.

- **ನಗರ ಸಹಕಾರಿ ಬ್ಯಾಂಕುಗಳ ಸಮಿತಿ (1978)**

ಕೆ. ಮಾಧವ್ ದಾಸ್ ಅವರ ಅಧ್ಯಕ್ಷತೆಯಲ್ಲಿ ನಗರ ಸಹಕಾರಿ ಬ್ಯಾಂಕ್‌ಗಳ ಸಮಿತಿಯು ನಗರ ಸಹಕಾರಿ ಬ್ಯಾಂಕ್‌ಗಳ ಕಾರ್ಯಸಾಧ್ಯತೆಯ ಬಗ್ಗೆ ಸಲಹೆ ನೀಡಿತು, ಇದು ಪ್ರಾಥಮಿಕ ಪತ್ತಿನ ಸಂಘದ ಆರಂಭಿಕ ಬ್ಯಾಂಕಿಂಗ್ ವ್ಯವಹಾರದ ಅಭ್ಯಾಸವನ್ನು ಬೆಂಬಲಿಸುವುದಿಲ್ಲ ಮತ್ತು ಪ್ರಾಥಮಿಕ ಪತ್ತಿನ ಸಂಘಗಳು ತಮ್ಮ ಹೆಸರಿನ ಭಾಗವಾಗಿ 'ಬ್ಯಾಂಕ್', 'ಬ್ಯಾಂಕರ್' ಅಥವಾ 'ಬ್ಯಾಂಕಿಂಗ್' ಪದವನ್ನು ಬಳಸಬಾರದು ಎಂದು ಅಭಿಪ್ರಾಯಪಟ್ಟಿತು. ಲೆಕ್ಕಪರಿಶೋಧನೆಯಲ್ಲಿ 'ಎ' ಅಥವಾ 'ಬಿ' ವರ್ಗವನ್ನು ಗಳಿಸಿದ ಅರ್ಬನ್ ಬ್ಯಾಂಕ್ ಬ್ಯಾಂಕ್‌ಗಳಲ್ಲಿ ಹೆಚ್ಚುವರಿ ಹಣವನ್ನು ಇರಿಸಿಕೊಳ್ಳಲು ರಾಜ್ಯ ಸರ್ಕಾರವು ಸ್ಥಳೀಯ ಸಂಸ್ಥೆಗಳು, ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಸಾರ್ವಜನಿಕ ಟ್ರಸ್ಟ್‌ಗಳಿಗೆ ಅನುಮತಿ ನೀಡಬೇಕು ಎಂದು ಸೂಚಿಸಿತು.

- **ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ [ಕ್ರಾಫಿಕಾರ್ಡ್] ಸಾಂಸ್ಥಿಕ ಸಾಲದ ವ್ಯವಸ್ಥೆಗಳನ್ನು ಪರಿಶೀಲಿಸಲು ಸಮಿತಿಯ ವರದಿ (1981)**

ಬಿ. ಶಿವರಾಮನ್ ಅವರ ಅಧ್ಯಕ್ಷತೆಯಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ (ಕ್ರಾಫಿಕಾರ್ಡ್) ಸಾಂಸ್ಥಿಕ ಸಾಲದ ವ್ಯವಸ್ಥೆಗಳನ್ನು ಪರಿಶೀಲಿಸಲು ಆರ್‌ಬಿಐ ಸಮಿತಿಯನ್ನು ರಚಿಸಿತು.

ರೈತ ಸೇವಾ ಸಂಘಗಳು ಮತ್ತು ದೊಡ್ಡ ಗಾತ್ರದ ಆದಿವಾಸಿ ವಿವಿಧೋದ್ದೇಶ ಸಂಘಗಳನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು ತೀವ್ರ ಪ್ರಯತ್ನಗಳನ್ನು ಮಾಡಬೇಕು ಎಂದು ಸಮಿತಿಯು ಒತ್ತಾಯಿಸಿತು. ಮರುಸಂಘಟಿತ ಸಂಘಗಳನ್ನು ಎಲ್ಲಾ ರೀತಿಯ ಸಾಲಕ್ಕಾಗಿ ಗ್ರಾಮದಲ್ಲಿ ಒಂದೇ ಸಂಪರ್ಕ ಬಿಂದುವಾಗಿ ಪರಿವರ್ತಿಸುವುದು ಗುರಿಯಾಗಬೇಕು ಎಂದು ಭಾವಿಸಿತು. ತಮ್ಮ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕುಶಲಕರ್ಮಿಗಳು, ಕಸುಬುದಾರರು ಮತ್ತು ಕೃಷಿ ಕಾರ್ಮಿಕರಂತಹ ಇತರ ಗ್ರಾಮೀಣ ಉತ್ಪಾದಕರಿಗೆ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಈ ಸಂಘಗಳು ತಮ್ಮ ಕಾರ್ಯವನ್ನು ವೈವಿಧ್ಯಗೊಳಿಸಬೇಕು ಮತ್ತು ತಮ್ಮ ಸಂಪನ್ಮೂಲಗಳು ಹಾಗೂ ವ್ಯವಹಾರವನ್ನು ಹೆಚ್ಚಿಸಿಕೊಳ್ಳಬೇಕು. ಕಂಅಖ ಗಳು ಚದುರಿದ ಬ್ಯಾಂಕಿಂಗ್ ಅಭ್ಯಾಸವನ್ನು ಸರಿಪಡಿಸಬೇಕು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಠೇವಣಿಗಳನ್ನು ಸಂಗ್ರಹಿಸಬೇಕು ಎಂಬುದನ್ನು ಗಮನಿಸಿತು. ಸಮಗ್ರ ಗ್ರಾಮೀಣ ಅಭಿವೃದ್ಧಿಯ ಬೆಳಕಿನಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕ್ ಅನ್ನು ಸ್ಥಾಪಿಸುವ ಅಪೇಕ್ಷಣೀಯತೆ ಮತ್ತು ಕಾರ್ಯಸಾಧ್ಯತೆಯನ್ನು ಸಮಿತಿಯು ಪರಿಗಣಿಸಿತು. ಅಸ್ತಿತ್ವದಲ್ಲಿರುವ ದೀರ್ಘಾವಧಿಯ ಸಹಕಾರಿ ಸಾಲದ ರಚನೆಯಲ್ಲಿ (ಕೆಲವು ರಾಜ್ಯಗಳಲ್ಲಿ ಸಂಯುಕ್ತ ಮತ್ತು ಇತರರಲ್ಲಿ ಏಕೀಕೃತ) ಏಕರೂಪತೆಯನ್ನು ತರುವುದಕ್ಕಾಗಿ ಮಾತ್ರ ತೊಂದರೆಗೊಳಗಾಗಬೇಕಾಗಿಲ್ಲ ಎಂದು ಸಮಿತಿಯು ಒಪ್ಪಿಕೊಂಡಿತು.

---

.....27ನೇ ಪುಟದಿಂದ

ದಿನಾಂಕ 14.07.2023ರಂದು ಭಾರತಕ್ಕೆ ಅತ್ಯಂತ ಮಹತ್ವದ ದಿನ ಎಂದು ಸಾಬೀತಾಗಿದೆ. ಇಡೀ ವಿಶ್ವದ ಕಣ್ಣು ಭಾರತದತ್ತ ನೆಟ್ಟಿದೆ. ಭಾರತವು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ (Space) ಕೇಂದ್ರದಿಂದ ಮಧ್ಯಾಹ್ನ 2:35 ಕ್ಕೆ ಚಂದ್ರಯಾನ–3 ಅನ್ನು ಉಡಾವಣೆ ಮಾಡಿದೆ. ಚಂದ್ರಯಾನ–3ರ ಲ್ಯಾಂಡರ್, ರೋವರ್ ಮತ್ತು ಪ್ರೊಪಲ್ಷನ್ ಮಾಡ್ಯೂಲ್‌ಲ್ಲಿ ಒಟ್ಟು ಆರು ಪಾಲ್ಗೊಳ್ಳುತ್ತಾ ಹೋಗುತ್ತಿವೆ. ಆದರೆ ಅತ್ಯಂತ ಮುಖ್ಯವಾದ ವಿಷಯವೆಂದರೆ 'ರಾಕೆಟ್ ವುಮನ್' (Rocket Woman) ಎಂದು ಕರೆಯಲ್ಪಡುವ ಬಾಹ್ಯಾಕಾಶ ವಿಜ್ಞಾನಿ ರಿತು ಕರಿದಾಲ್ ಶ್ರೀವಾಸ್ತವ ಅವರು ಈ ಕಾರ್ಯಾಚರಣೆಯನ್ನು ಮುಂಭಾಗದಿಂದ ಮುನ್ನಡೆಸಿದ್ದಾರೆ. ಈ ಮಹತ್ವದ ಮಿಷನ್ನ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಚಂದ್ರಯಾನ–3 ಲ್ಯಾಂಡಿಂಗ್ ಜವಾಬ್ದಾರಿಯನ್ನು ಮಹಿಳಾ ವಿಜ್ಞಾನಿ ರಿತು ಕರಿಧಾಲ್ ಅವರಿಗೆ ವಹಿಸಲಾಗಿದೆ. ಚಂದ್ರಯಾನ 3ರ ಮಿಷನ್ ನಿರ್ದೇಶಕಿಯಾಗಿ ರಿತು ಕರಿದಾಲ್ ಅವರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಲಕ್ನೋದಲ್ಲಿ ವಾಸಿಸುವ ಭಾರತೀಯ ಮಹಿಳೆಯರು ಹವಾಮಾನ ಜಗತ್ತಿನಲ್ಲಿ ಬೆಳೆಯುತ್ತಿರುವ ಭಯದ ಉದಾಹರಣೆಯಾಗಿದೆ. ಮಂಗಳಯಾನ ಮಿಷನ್ನಲ್ಲಿ ತನ್ನ ಕೈಚಳಕ ತೋರಿರುವ ರಿತುರವರು ಚಂದ್ರಯಾನ–3 ಮೂಲಕ ಮತ್ತೊಂದು ಯಶಸ್ವಿನ ಹಾರಾಟ ನಡೆಸಲಿದ್ದಾರೆ. ಹಿಂದಿನ ಕಾರ್ಯಾಚರಣೆಯಲ್ಲಿ ರಿತು ಕರಿದಾಲ್ ಶ್ರೀವಾಸ್ತವ ಅವರ ಪಾತ್ರವನ್ನು ಗಮನದಲ್ಲಿಟ್ಟುಕೊಂಡು ರಿತುರವರವರಿಗೆ ಮಂಗಳಯಾನ ಮಿಷನ್‌ನ ಉಪ ಕಾರ್ಯಾಚರಣೆ ನಿರ್ದೇಶಕರಾಗಿ ಈ ಜವಾಬ್ದಾರಿಯನ್ನು ನೀಡಲಾಗಿದೆ.

ಇಂದಿನ ಸಮಾಜದಲ್ಲಿ ಮಹಿಳೆ ಎಲ್ಲಾ ಕ್ಷೇತ್ರದಲ್ಲೂ ಪುರುಷರಿಗೆ ಸಮಾನವಾಗಿ ಹುದ್ದೆಯನ್ನು ಅಲಂಕರಿಸಿದ್ದಾರೆ. ವಿಜ್ಞಾನ ಮತ್ತು ರಕ್ಷಣಾ ಕ್ಷೇತ್ರ ರಾಜಕೀಯ, ಶಿಕ್ಷಣ ಕ್ಷೇತ್ರಗಳಲ್ಲಿ ಮಹಿಳೆ ತನ್ನದೆ ಆದ ಛಾಪು ಮೂಡಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಮತ್ತೊಮ್ಮೆ ನಾರಿ ಶಕ್ತಿಗೆ ಪುಷ್ಟಿಯನ್ನು ನೀಡಿದ ವಿಷಯವಾಗಿದೆ.

# 76ನೇ ಸ್ವಾತಂತ್ರ್ಯ ಮಹೋತ್ಸವದ ಆಚರಣೆಯ ಹೆಮ್ಮೆ - ವಿಶೇಷತೆಗಳು

– ಮಹಾಲಕ್ಷ್ಮಿ ಎ ಎನ್, ಮೈಸೂರು

ಆಡಳಿತದಿಂದ ಭಾರತ ದೇಶ 1947 ಆಗಸ್ಟ್ 15 ರಂದು ಸ್ವಾತಂತ್ರ್ಯವಾಯಿತು . ಪ್ರತಿ ವರ್ಷ ಭಾರತದಾದ್ಯಂತ ಈ ದಿನವನ್ನು ಸ್ವಾತಂತ್ರ್ಯ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಈ ದಿನ ಇಡೀ ದೇಶದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ದೇಶದ ಹಲವೆಡೆ ತ್ರಿವರ್ಣ ಧ್ವಜವನ್ನು ಹಾರಿಸಿ ಸಿಹಿ ಹಂಚಲಾಗುತ್ತದೆ. ಈ ಆಚರಣೆಯ ಪ್ರಮುಖ ಸಮಾರಂಬ ದೆಹಲಿಯ ಕೆಂಪು ಕೋಟೆಯಲ್ಲಿ ನಡೆಯುತ್ತದೆ. ಈ ಸಮಾರಂಭದಲ್ಲಿ ಭಾರತದ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಧ್ವಜವನ್ನು ಹಾರಿಸಿ ಭಾರತದ ರಾಷ್ಟ್ರ ಗೀತೆಯನ್ನು ("ಜನಗಣ ಮನ")ವನ್ನು ಹಾಡಿ ನಂತರ ರಾಷ್ಟ್ರವನ್ನು ಉದ್ದೇಶಿಸಿ ಭಾಷಣವನ್ನು ಮಾಡುತ್ತಾರೆ. ಈ ಭಾಷಣದಲ್ಲಿ ದೇಶದ ಸಾದನೆ, ದೇಶದ ಮುಂದಿರುವ ಪ್ರಮೂಖ ಸವಾಲುಗಳು ಬಗ್ಗೆ ಮಾತನಾಡಿ, ಕೆಲವು ಪ್ರಗತಿ ಯೋಜನೆಗಳನ್ನು ಪ್ರಕಟಿಸಲಾಗುತ್ತದೆ. ಈ ದಿನದಂದು ದೇಶದ ಸ್ವಾತಂತ್ರ್ಯಕ್ಕೆ ಪ್ರಾಣ ತ್ಯಾಗವನ್ನು ಮಾಡಿದ ನಾಯಕರುಗಳನ್ನು ಸ್ಮರಿಸಲಾಗುತ್ತದೆ.

**ಸ್ವಾತಂತ್ರ್ಯದ ಹಾದಿ ;–**

**ಜವಹರಲಾಲ್ ನೆಹರು ರವರ ಟ್ರಿಸ್ಟ್ ವಿಥ್ ಡೆಸ್ಟಿನಿ ಭಾಷಣ**

ಜೂನ್ 3 1947 ರಂದು ಅಂದಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್‌ಮೌಂಟ್ ಬ್ಯಾಟನ್, ಬ್ರಿಟಿಷ್ ಭಾರತದ ಸಾಮ್ರಾಜ್ಯವನ್ನು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ರಾಷ್ಟ್ರಗಳಾಗಿ ವಿಭಜಿಸುವುದಾಗಿ ಘೋಷಿಸಿದರು. ಇದರ ನಂತರ ಭಾರತದ ಸ್ವಾತಂತ್ರ್ಯ ಕಾಯಿದೆ 1947ರ ಅನ್ವಯ ಆಗಸ್ಟ್ 15, 1947ರಂದು ಭಾರತವನ್ನು ಸ್ವತಂತ್ರ್ಯ ರಾಷ್ಟ್ರವನ್ನಾಗಿ ಘೋಷಿಸಲಾಯಿತು. ಅಂದಿನ ಮಧ್ಯರಾತ್ರಿ (12.15ರ) ನಂತರ ಜವಹರಲಾಲ್ ನೆಹರು ಅವರು ದೇಶದ ಪ್ರಥಮ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅಂದು ಅವರು ರಾಷ್ಟ್ರವನ್ನುದ್ದೇಶಿಸಿ, ಟ್ರಿಸ್ಟ್ ವಿಥ್ ಡೆಸ್ಟಿನಿ ಭಾಷಣ ("ಭಾಗ್ಯದೊಡನೆ ಒಪ್ಪಂದ " ಭಾಷಣ) ಮಾಡಿದರು.

ಮಧ್ಯರಾತ್ರಿಯ ಗಂಟೆ ಹೊಡೆಯುತ್ತಿದ್ದಂತೆ ಜಗತ್ತು ಮಲಗಿರುವಾಗ ಭಾರತವು ಚಲನಶೀಲತೆ ಮತ್ತು ಸ್ವಾತಂತ್ರ್ಯಕ್ಕೆ ಎಚ್ಚರಗೊಳ್ಳುತ್ತದೆ. ಇತಿಹಾದಲ್ಲಿ ಅಪರುಪವಾಗಿ ಬರುವ ಇಂಥ ಈ ಗಳಿಗೆಯಲ್ಲಿ ಹಳತಿನಿಂದ ಹೊಸತಿಗೆ ಕಾಲಿಡುತ್ತಿದ್ದೇವೆ. ಹಳೆಯ ಯುಗ ಮುಗಿದು ಬಹುಕಾಲ ದೇಶವೊಂದರ ಚೇತನವು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಿದೆ.

ಇವತ್ತು ನಾವು ನಮ್ಮ ದುರಾದೃಷ್ಟದ ಕಾಲವನ್ನು ಮುಗಿಸುತ್ತಿದ್ದೇವೆ ಮತ್ತು ಭಾರತವು ತನ್ನನ್ನು ತಾನು ಮತ್ತೆ ಕಂಡುಕೊಳ್ಳುತ್ತಿದೆ.

ಪ್ರಧಾನ ಮಂತ್ರಿ ನೆಹರು ಮತ್ತು ಉಪಪ್ರಧಾನಮಂತ್ರಿ ಸರ್ದಾರ್ ವಲ್ಲಭಾಯ್ ಪಟೇಲ್, ಲಾರ್ಡ್ ಮೌಂಟ್ ಬ್ಯಾಟನ್ನರನ್ನು ಭಾರತದ ಗವರ್ನರ್ ಜನರಲ್ ಆಗಿ ಮುಂದುವರೆಯಲು ಕೋರಿದರು. ಜೂನ್ 1948ರಲ್ಲಿ ಅವರ ಸ್ಥಾನಕ್ಕೆ ಚಕ್ರವರ್ತಿ ರಾಜಗೋಪಾಲಚಾರಿ ಅವರು ಬಂದರು. ಪಟೇಲರು 565 ಸಂಸ್ಥಾನಗಳ ಭಾರತದ ರಾಜಕೀಯ ಏಕೀಕರಣದ ಜವಾಬ್ದಾರಿಯನ್ನು ವಹಿಸಿಕೊಂಡರು, ಜುನಾಗಢ, ಜಮ್ಮು ಮತ್ತು ಕಾಶ್ಮೀರ, ಮತ್ತು ಹೈದರಬಾದ್ ಸಂಸ್ಥಾನಗಳನ್ನು ಭಾರತಕ್ಕೆ ಸೇರ್ಪಡೆ ಮಾಡುವಲ್ಲಿ ಸೈನಿಕ ಬಲವನ್ನು ಉಪಯೋಗಿಸಿ "ರೇಷ್ಮೆ ಕೈಗವಸಿನಲ್ಲಿ ಉಕ್ಕಿನ ಮುಷ್ಠಿ" ತಂತ್ರವನ್ನು ಉಪಯೋಗಿಸಿದರು.

ಸಂವಿಧಾನದ ರಚನಾಸಭೆಯು ಸಂವಿಧಾನದ ಕರಡ ಸಭೆಯನ್ನು 26 ನವೆಂಬರ್ 1949 ರಂದು ಸಿದ್ದಗೊಳಿಸುವ ಕಾರ್ಯವನ್ನು ಸಂಪೂರ್ಣಗೊಳಿಸಿತು. 26 ಜನವರಿ 1950 ರಂದು ಭಾರತೀಯ ಗಣ–ರಾಜ್ಯವನ್ನು ಅಧಿಕೃತವಾಗಿ ಘೋಷಿಸಲಾಯಿತು ಸಂವಿದಾನದ ರಚನಾಸಭೆಯು ಡಾ. ರಾಜೇಂದ್ರಪ್ರಸಾದ್‌ರನ್ನು ದೇಶದ ಪ್ರಥಮ ರಾಷ್ಟ್ರಪತಿಯಾಗಿ ಚುನಾಯಿಸಿತು. ಅವರು ಗವರ್ನರ್ ರಾಜಗೋಪಾಲಚಾ–ರಿಯವರಿಂದ ಅಧಿಕಾರವನ್ನು ಸ್ವೀಕರಿಸಿದರು. ನಂತರ ಸ್ವತಂತ್ರ್ಯ ಸಾರ್ವಭೌಮ ಭಾರತವು ಇನ್ನೆರಡು ಪ್ರದೇಶಗಳನ್ನು ತನ್ನಲ್ಲಿ ಸೇರಿಸಿಕೊಂಡಿತು. ವಿಮೋಚನಗೊಳಿಸಿದ ಗೋವಾ ಮತ್ತು

ಫ್ರೆಂಚರು 1954ರಲ್ಲಿ ಒಪ್ಪಿಸಿದ ಪಾಂಡಿಚೇರಿ 1952ರಲ್ಲಿ ಭಾರತವು ತನ್ನ ಮೊದಲ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿತು. ಶೇ62ಕ್ಕೂ ಹೆಚ್ಚು ಮತದಾರರು ಅದರಲ್ಲಿ ಭಾಗವಹಿಸಿದರು. ಅದರಿಂದಾಗಿ ಭಾರತವು ವಾಸ್ತವದಲ್ಲಿ ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವವಾಯಿತು.

ಭಾರತದ ಪ್ರಧಾನ ಮಂತ್ರಿ ದೇಶದ ಕೆಂಪು ಕೋಟೆಯಲ್ಲಿ ಐತಿಹಾಸಿಕ ಸ್ಥಳದಲ್ಲಿ ಆಗಸ್ಟ್ 15ರಂದು ಭಾರತದ ಧ್ವಜದ ಆರೋಣವನ್ನು ನೆರವೇ–ರಿಸುವರು.

ಆಗಸ್ಟ್ 15 ಭಾರತದ ರಾಷ್ಟ್ರೀಯ ಸಂಭ್ರಮಾಚರಣೆಯ ದಿನ ರಾಜಧಾನಿ ನವದೆಹಲಿಯಲ್ಲಿ ಬಹ್ವಂಶ ಸರಕಾರಿ ಕಛೇರಿಗಳು ವಿದ್ಯುದ್ದೀಪಗಳಿಂದ ಬೆಳಗುತ್ತವೆ. ಎಲ್ಲಾ ರಾಜ್ಯ ರಾಜದಾನಿಗಳಲ್ಲಿ ಧ್ವಜಾರೋಃಣ ಮತ್ತು ಸಾಂಸ್ಕೃತಿಕ ಸಮಾರಂಭಗಳನ್ನು ಆಚರಿಸುತ್ತಾರೆ. ದೇಶದಾದ್ಯಂತ ನಗರಗಳಲ್ಲಿ ಧ್ವಜಾರೋಹಣವನ್ನು ಆಯಾ ಕ್ಷೇತ್ರಗಳ ರಾಜಕೀಯ ಧುರೀಣರು ನೆರವೇರಿಸುತ್ತಾರೆ. ಖಾಸಗಿ ಸಂಸ್ಥೆಗಳಲ್ಲಿ ಧ್ವಜಾರೋಹಣವನ್ನು ಆಯಾ ಸಂಸ್ಥೆಯ ಹಿರಿಯ ಅಧಿಕಾರಿಗಳು ಮಾಡುತ್ತಾರೆ. ಶಾಲಕಾಲೇಜುಗಳು ತಮ್ಮ ಆವರಣದಲ್ಲಿ ಧ್ವಜಾರೋಹಣ ಮತ್ತು ಸಾಮಸ್ಕೃತಿಕ ಸಂಘ ಸಂಸ್ಥೆಗಳು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮನರಂಜನಾ ಕಾರ್ಯಕ್ರಮಗಳನ್ನು ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಬೀದಿ ಬೀದಿಗಳಲ್ಲಿ ರಾಷ್ಟ್ರದ ಧ್ವಜವು ರಾರಾಜಿಸುತ್ತಿರುತ್ತದೆ. ರಾಷ್ಟ್ರೀಯತೆ ಹಾಘೂ ಭಾವೈಕ್ಯತೆಗಳನ್ನು ಬಿಂಬಿಸುವ ಹಲವಾರು ಕಾರ್ಯಕ್ರಮಗಳು ಎಲ್ಲೆಡೆ ನೋಡಲು ಅವಕಾಶ ಸ್ವಾತಂತ್ರ್ಯೋತ್ಸವದ ಆಚರಣೆಯ ಸಂಭ್ರಮದ ಸಡಗರ ಭಾರತೀಯರಾದ ನಮಗೆ ಹೆಮ್ಮೆಯ ವಿಷಯ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Licensed to post without Prepayment License No. PMG BG/WPP-384/2023-2025.

# ಸಹಕಾರ ಸಂಘಗಳು ಮತ್ತು ಪಾರದರ್ಶಕತೆ

– ಶ್ರೀ ಶಂಕರ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು.

ಈ ಹಿಂದೆ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಜನಸಮುದಾಯದ ಚಳುವಳಿಯಾದಂತೆ ಸಹಕಾರಿ ಆಂದೋಲನವಾಗಿ ಗುರುತಿಸಿಕೊಂಡಿತು. ಸಣ್ಣ ಮತ್ತು ಅತಿ ಸಣ್ಣ ರೈತರು, ಭೂರತಹಿತ ಕಾರ್ಮಿಕರು, ಮೀನುಗಾರರು, ಕುಶಲಕರ್ಮಿಗಳ ಒತ್ತಾಸೆ ಮತ್ತು ಆಕಾಂಕ್ಷೆಗಳೇ ಪ್ರಮುಖವಾಗಿ ಅಡಕವಾಗಿದ್ದರು. ಸಹಕಾರ ಚಳುವಳಿಯ ಬಗ್ಗೆ ನಾವು ತಿಳಿದುಕೊಳ್ಳಬೇಕಾದರೆ ಸುಮಾರು 5 ಶತಾಬ್ಧಿಗಲ ಹಿಂದಕ್ಕೆ ಹೋಗಬೇಕಾಗುತ್ತದೆ. 1844ರಲ್ಲಿ ಇಂಗ್ಲೆಂಡಿನಲ್ಲಿ ಗ್ರಾಹಕ ಚಳುವಳಿಯ ಮೂಲಕ ಪ್ರಾರಂಭವಾದ ಸಹಕಾರ ಸಂಸ್ಥೆಗಳು ಭಾರತದಲ್ಲಿ ಸರ್ಕಾರದವರ ಕೃಪಾಪೋಷಿತವಾಗಿ 1905ರಲ್ಲಿ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ಮೊಟ್ಟಮೊದಲ ಸಹಕಾರಿ ಸಂಘ ಪ್ರಾರಂಭವಾಗಿದ್ದು ಒಂದು ಇತಿಹಾಸ. ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಸ್ಥಾಪಿಸಲಾದ ಸಂಸ್ಥೆಗಳಾಗಿದ್ದು ಸಂಪೂರ್ಣ ನಿಯಂತ್ರಣ ಸಂಘದ ಸದಸ್ಯರುಗಳಿಗೆ ಒಳಪಟ್ಟಿರುತ್ತದೆ. ಸಂಘದ ಕಾರ್ಯನೀತಿಯನ್ನು ರೂಪಿಸುವಲ್ಲಿ ಮತ್ತು ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಭಾಗವಹಿಸುತ್ತಾರೆ. ಈ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸದಸ್ಯರುಗಳೀಗೆ ಜವಾಬ್ದಾರರಾಗಿರುತ್ತಾರೆ. ಮತ್ತು ಉತ್ತರದಾಯಿತ್ವವನ್ನು ಹೊಂದಿರುತ್ತಾರೆ. ಸಹಕಾರಿ ಕ್ಷೇತ್ರದ ಮುಖ್ಯ ತಾಕತ್ತು ಎಂದರೆ ಅದರಲ್ಲಿಯ ಸಮುದ್ರಸದೃಶಗುಣ. ಸಮುದ್ರಕ್ಕೆ ನೀವು ಬಾಟಲಿ, ಪ್ಲಾಸ್ಟಿಕ್ ಕಪ್, ಬೀರು ಬಾಟಲಿ ಮುಂತಾದ ಕಸ ಎಸೆಯಿರಿ ಅದು ಕೆಲ ಸಮುದ್ರದಲ್ಲಿತೇ ಹೊರತಳ್ಳಿಬಿಡುತ್ತದೆ. ಸಹಕಾರ ಕ್ಷೇತ್ರದ್ದೂ ಇದೇ ಕೆಲಸ. ಭ್ರಷ್ಟರು ಕೆಲಕಾಲ ಮೆರೆದಿರಬಹುದು. ಆದರೆ ಅವರು ಇಲ್ಲಿಯೂ ಸಹ ಸಮುದ್ರಕ್ಕೆ ಎಸೆಯುವ ಕಸವೇ. ಆದರೆ ಈ ಕ್ಷೇತ್ರದಲ್ಲಿ ಮಹಾತ್ಮರು ಮಾಡಿರುವ ಅನೇಕ ವರ್ಷಗಳ ಸಾಧನೆ ಒಮ್ಮೊಮ್ಮೆ ವ್ಯರ್ಥವಾಗಿ ಹೋಗುವುದು. ಮತ್ತೊಂದು ಅಘಾತಕಾರಿ ವಿಷಯವೆಂದರೆ ವಂಚನೆಯ ಜಾಲದಲ್ಲಿ ಸಂಸ್ಥೆಗಳು ಕೂಡ ಕಣ್ಮರೆಯಾವುಗುವುದು ಒಂದು ಆತಂಕಕಾರಿ ವಿಷಯ. ಇಂದಿನ ದಿನಮಾನದ ವಾಣಿಜ್ಯೀಕರಣ ಕಂಪನಿ ಲಾಭಿ ಖಾಸಗೀಕರಣ ವಾತಾವರಣದಲಿ ಕೊನೆಗೂ ಸಹಕಾರ ಚಳುವಳಿಯೇ ಉತ್ತಮ ಉಪಾಯವಾಗಿರುತ್ತದೆ.

ಸಹಕಾರ ಸಂಸ್ಥೆಯಲ್ಲಿ ಪಾರದರ್ಶಕತೆ ಇರಲೇಬೇಕು. ಪಾರದರ್ಶಕತೆ ಪ್ರಮಾಣಿಕತೆ ಮತ್ತು ವಿಶ್ವಾಸರ್ಹತೆ ಸಹಕಾರ ಸಂಘದ ಮೂಲಮಂತ್ರವಾಗಿರಬೇಕು. ಒಮ್ಮೆಮ್ಮೆ ವ್ಯಕ್ತಿಗಳ ಭ್ರಷ್ಟಾಚಾರ ಸರ್ಕಾರದ ಅಪರಿಮಿತ ಹಸ್ತಕ್ಷೇಪ ಅಧಿಕಾರಿಗಳ ಭ್ರಷ್ಟಾಚಾರದಿಮದ ಸಹಕಾರ ಸಂಸ್ಥೆಗಳು ನೆಲಕಚ್ಚಿಸಬಿಡುವುದು ಘೋರ ದುರಂತ. ಆದರೆ ಸಂಘದಲ್ಲಿ ನಿಷ್ಠವಂತ ಸಹಕಾರಿಗಳ ಮತ್ತು ಪ್ರಾಮಾಣಿಕ ಅಧಿಕಾರಿ ವರ್ಗದ ಬದ್ಧತೆಯುಳ್ಳ ಸಹಕಾರಿಗಳ ಬರದೊಂದಿಗೆ ಸಹಕಾರ ಸಂಘಗಳು ಪುನಶ್ಚೇತನ ಪಡೆಯಬಲ್ಲವು. ಎಲ್ಲಿಯವರೆಗೆ ಸಂಘಗಳು ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಇರುತ್ತದೆಯೇ ಅಲ್ಲಿಯವರೆಗೆ ಸಂಘಗಳು ಉತ್ತಮ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಇರುತ್ತದೆಯೋ ಅಲ್ಲಿಯವರೆಗೆ ಸಂಘಗಳು ಉತ್ತಮ ರೀತಿಯಿಂದ ಅಭಿವೃದ್ಧಿ ಹೊಂದಬಲ್ಲವು. ಈ ಹಿನ್ನೆಲೆಯಲ್ಲಿ ಸಹಕಾರ ಶಿಕ್ಷಣ ಮತ್ತು ತರಬೇತಿ ಮಾರ್ಗದರ್ಶನ, ವೃತ್ತಿ ಶಿಕ್ಷಣ ಅತಿ ಅವಶ್ಯ ಒಟ್ಟಿನಲ್ಲಿ ಹೇಳಬೇಕಾದರೆ 1914ರಲ್ಲಿ ರಚನೆಗೊಂಡ ಸರ್ ಎಡ್ವರ್ಡ್ ಮೆಕ್ಲಗಾನ್ ಸಮಿತಿ ಹೇಳಿದಮತೆ "ಶಿಕ್ಷಣವಿಲ್ಲದೇ ಸಹಕಾರವಿಲ್ಲ ಎಂಬ ಹೇಳಿಕೆ ಸದಾ ಕಾಲವೂ ಸಹಕಾರಿ ಚಳುವಳಿಯ ಮುನ್ನಡೆಯಲ್ಲಿ ಮಾರ್ಗದರ್ಶನವಾಗಿ ನಿಲ್ಲಬಲ್ಲದು.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟ್ಯಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟ್ಯಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003